Recognition of the Congress (R) as an Opposition Party in the Mysore Legislative Assembly

MR. SPEAKER.—I have an announcement to make before the Hon'ble House. I have already informed the Hon. House that a party called "Congress-R" has been formed by some of the Members of this House and have named hon. Member Sri H. Sid daveerappa as the Leader of that party and some others as other office-bearers. The strength of the party, according to the list of members duly signed and furnished to me, is 23 members. A common party programme as required under the rules governing this subject of recognition of parties has also been furnished. Therefore, I recognise this party for the time being as the largest single party in opposition and its Leader Sri Siddaveerappa as the Leader of the Opposition, for the time being. I am saying, for the time being, because another list containing about 37 or 38 names of members was also shown to me. But since there was some discrepancy in that list, I did not accept it. If that list is presented again to me along with the relevant information required, I will consider the question of recognising that party also. Now, I request the Secretary to take necessary steps to allot separate block of seats to the members of the Congress-R party and its Leader.

† SRI VEERENDRA PATIL (Chief Minister).—As the Chief Minister and the Leader of this House, I would only like to suggest that whatever the Hon. Speaker decides about the Leader of the Opposition, he should be there for some time. If to-day 'X' is the Leader of Opposition, tomorrow 'Y' is the Leader of Opposition and day-after-tomorrow 'Z' is the Leader of Opposition, I do not think it will bring any credit to this House. Since you have already announced your decision, I welcome your decision but at the same time, I hope you will permit me to say that if a permanent or a semi-permanent arrangement is made then it becomes very easy to transact the business of this House.

MR. SPEAKER.—I may point out that these are very peculiar times and things go on changing from time to time. I had waited for a sufficiently long time to decide this matter. But I cannot wait indefinitely. Therefore I had to make this announcement. If any other party comes forward with sufficient number of members that will also be recognised. I also feel that hon. Members should try to have a stable and organised opposition in the interest of the working of this House. Now my announcement stands.

SRI VEERENDRA PATIL.—Sir, In view of the fact, that you have now announced your decision in the matter, courtesy demands that I, as the Leader of the House, should say something about the outgoing Leader of Opposition; also I have to welcome the new Leader of Opposition. May I have your permission to say something in this behalf?

Mr. SPEAKER:—Yes.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದಕ್ಕಿಂತ ಮುಂಚೆ ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈಗತಾನೇ ತಾವು ಈ ಸಭೆಗೆ ತಿಳಿಸಿದಂತೆ ಏನೊಂದು ಹೊಸಪಕ್ಷ ವಿರೋಧಪಕ್ಷದ ರೂಪದಲ್ಲಿ ಜನ್ಮ ತಾಳಿದೆ ಅದು ಕಾಂಗ್ರೆಸ್ (ಆರ್) ಎಂದು ಹೆಸರನ್ನು ಇಟ್ಟುಕೊಂಡು ಈ ದೇಶದಲ್ಲಿದೆ. ಈ ಒಂದು ದೃಷ್ಟಿಯಿಂದ ಇಂಡಿಕೇಟ್ ಪರವಾಗಿ 23 ಜನಗಳು ಇದ್ದೇವೆ, ನಮ್ಮನ್ನು ಈ ಸಭೆಯಲ್ಲಿ ವಿರೋಧ ಪಕ್ಷ ಎಂದು ಮಾನ್ಯ ಮಾಡಬೇಕು ಎಂದು ಅವರು ತಮಗೆ ಬರೆದಿದ್ದರು. ನಿಯಮದ ಪ್ರಕಾರ ಅವರು ನಾಯಕರು, ಉಪನಾಯಕರು, ವಿಪ್ ಮತ್ತು ಇತರ ಎಲ್ಲಾ ಪದಾಧಿಕಾರಿಗಳನ್ನು ಆರಿಸಿ ನಮಗೆ ಒಂದು ಲಿಸ್ಟನ್ನು ಕೊಟ್ಟಮೇಲೆ ಈ ಒಂದು ಪಕ್ಷವನ್ನು ಅಧಿಕೃತ ವಿರೋಧ ಪಕ್ಷ ಎಂದು ಪರಿಗಣಿಸುತ್ತೇವೆ ಎಂದು ತಾವು ಹೇಳಿದ್ದೀರಿ. ಈಗ ವಿರೋಧ ಪಕ್ಷದ ಸ್ಥಾನದಲ್ಲಿ ರೂಪತಾಳಿರತಕ್ಕ ಒಂದು ವಿರೋಧ ಪಕ್ಷ ಏನಿದೆ ಅದರ ಕಾರ್ಯಕ್ರಮ ಇತ್ಯಾದಿಗಳು ತಮಗೆ ಗೊತ್ತಿದೆ, ಆದ್ದರಿಂದ ತಾವು ಅದನ್ನು ಮಾನ್ಯ ಮಾಡಿದ್ದೀರಿ ಎಂದಮಾತ್ರಕ್ಕೇ ಇವೊತ್ತು ಶ್ರೀ ಶಿವಪ್ಪನವರನ್ನು ಈ ಸ್ಥಳದಿಂದ ಕಳುಹಿಸಿ ಬಿಟ್ಟಿದ್ದೇವೆ, ಆದ್ದರಿಂದ ಅವರನ್ನು ಅಭಿನಂದನ ಮಾಡಬೇಕು ಎಂದು ಹೇಳಿದರೆ ಅದು ಅವನರದ ವಿಷಯವಾಗುತ್ತದೆ. ಅವರು ವಿರೋಧ ಪಕ್ಷದ ನಾಯಕರ ಸ್ಥಾನದಿಂದ ಹೋಗಿಲ್ಲ. ಸಂಯುಕ್ತ ವಿಧಾಯಕ ದಳ ಮತ್ತು ಶಿವಪ್ಪನರು ಹೋಗಿಲ್ಲ. ಅಲ್ಲಿ ಇದ್ದ ಅಧ್ಯಕ್ಷರಿಗೆ ಉಪನಾಯಕರು ಮತ್ತು ನಜೀತಕರು ರಾಜಿನಾಮೆಯನ್ನು ಕೊಟ್ಟಿರುವುದರಿಂದ ಹೊಸ ಪರಿಸ್ಥಿತಿ ಉಂಟಾಗಿದೆ. ಹೊಸ ಪರಿಸ್ಥಿತಿಯನ್ನು ಪರಿಶೀಲನೆ ಮಾಡಲು ನಾವು ವಿಧಾನಸಭೆ ಸೇರಿದ ರಾಗಾಯಿತು ಅನೇಕ ಸಲ ಸೇರಿದ್ದೇವೆ. ಈಒಂದು ಹೊಸಪರಿಸ್ಥಿತಿಯಲ್ಲಿ ಸಂಯುಕ್ತ ವಿಧಾಯಕ ದಳವನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎನ್ನುವ ಪ್ರಶ್ನೆ ಹುಟ್ಟಿತು.' ಈಗ 3 ವರ್ಷಗಳಿಂದ ತಾವು ಅದಕ್ಕೆ ಅಧಿಕೃತವಾದ ಮಾನ್ಯತೆಯನ್ನು ನೀಡಲಿಲ್ಲ, ಆದರೂ ಅವರನ್ನು ವಿರೋಧ ಪಕ್ಷದ ನಾಯಕರು ಎಂದು ತಾವು ಕರೆಯುತ್ತೀರಿ. ಆದರೆ ಅಧಿಕೃತವಾಗಿ ವಿರೋಧಪಕ್ಷದ ನಾಯಕರು ಎಂದು ರೆಕಾರ್ಡಿನಲ್ಲಿ ಇಲ್ಲ. ಇಂತಿಂಥವರು ನಾಯಕರು ಉಪನಾಯಕರು, ಮತ್ತು ವಿಪ್ ಎಂದು ಹೇಳಿ ಪಟ್ಟಿಯನ್ನು ಕೊಟ್ಟಿಲ್ಲ. ಕಾಂಗ್ರೆಸ್ ಒಡೆದ ಮೇಲೆ ಉಪನಿಯಮವನ್ನು ಹೊಂದಿಸಿಕೊಂಡಿದ್ದೀರಿ ಆ ನಿಯಮದ ಪ್ರಕಾರ ಈಗ ನಾವು ನಾಯಕರು ಉಪನಾಯಕರು ಮತ್ತು ವಿಪ್ ಇತ್ಯಾದಿ ಪದಾಧಿಕಾರಿಗಳನ್ನು ಆರಿಸಿ ಅದರ ಪಟ್ಟಿಯನ್ನು ತಮ್ಮ ಕಡೆಗೆ ಕೊಟ್ಟಮೇಲೆ ಎಸ್. ವಿ. ಡಿ. ಮಾನ್ಯತೆ ಕೊಡುವುದಕ್ಕೆ ಬರುತ್ತದೆ. ಆದ್ದರಿಂದ ನನ್ನ ಕಳಕಳಿಯ ಏನಂತಿ ಏನೆಂದರೆ ಹೊಸದಾಗಿ ಹುಟ್ಟಿರತಕ್ಕ ವಿರೋಧ ಪಕ್ಷ ಎಂಬ ಹೆಸರಿನಲ್ಲಿ ಕೆಲಸ ಮಾಡತಕ್ಕ ಶ್ರೀಮಾನ್ ಸಿದ್ದವೀರಪ್ಪನವರ ನಾಯಕತ್ವದಲ್ಲಿ ಇರುವ ಪಕ್ಷಕ್ಕೆ ತಾವು ರೆಕಗ್ನಿಷನ್ ಕೊಟ್ಟಿದ್ದೀರಿ, ನಾನು ಅದಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ. ಅವರು ವಿರೋಧಪಕ್ಷದಲ್ಲಿರುವುದರಿಂದ ಅವರು ನಮ್ಮ ಜೊತೆಯಲ್ಲಿ ಸಹಕರಿಸಿ ಕೆಲಸ ಮಾಡುತ್ತಾರೆ ಎಂದು ನಾನು ಸ್ಥೂಲವಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತೇನೆ.

ಎರಡನೆಯದು ಈಗ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದ ಪ್ರಕಾರ ಇದನ್ನು ಯೋಚನೆ ಮಾಡಿದರೆ ಇದು ಸ್ವಲ್ಪ ತಾಂತ್ರಿಕವಾದ ವಿಷಯ. ಈಗ ಹೊಸದಾಗಿ ಉದ್ಭವಿಸಿರತಕ್ಕ ವಿರೋಧ ಪಕ್ಷ ಎಂಬ ಸಿದ್ದವೀರಪ್ಪನವರ ನಾಯಕತ್ವದ ಪಕ್ಷಕ್ಕೆ ನಿಯಮದ ಪ್ರಕಾರ ಅಧ್ಯಕ್ಷರು ಮಾನ್ಯತೆಯನ್ನು ಕೊಟ್ಟಿದ್ದಾರೆ. ಆದರೆ ಎಸ್. ವಿ. ಡಿ. ವಿಸರ್ಜನೆಯಾಗಿದೆ ಎಂದು ತಾವು ಹೇಳುವುದಕ್ಕಾಗುವುದಿಲ್ಲ. ಶ್ರೀಮಾನ್ ಶಿವಪ್ಪನವರ ನಾಯಕತ್ವ ಮುಗಿದುಹೋಯಿತು ಎಂದು ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಎಸ್. ವಿ.ಡಿ. ವಿಚಾರವನ್ನು ನಾನು ಹೇಳಲಿಲ್ಲ. The hon. Member Sri Gopala Gowda is rather unfair to the Chair. I have never made reference to S.V.D. On the contrary I said that some members on behalf of the S. V. D. party showed me a list. But since all the requirements of the rules in this behalf have not been fulfiled I did not accept it. I told the hon. members to present the list together with the relevant information in proper form.

Sri VEERENDRA PATIL.—My impression is that since the Hon. Speaker has just now announced the name of the new Leader of Opposition and for the time being the new Leader of Opposition is

Sri H. Siddavarappa. From today Sri Sivappa is not the Leader of Opposition. As Leader of the House courtesy demands that I should say something.

Mr. SPEAKER.—My friend Sri Gopal Gowda said that S. V. D. list of Members was presented to me. But the signatures of members were not attached; Information regarding common programme, leadership and other requirements was not also supplied. It was true that a request was made for recognising it as an Opposition Party, but that could not be done for the reasons I have already explained. It was no doubt a *de facto* opposition party and Sri S. Sivappa was its *de facto* leader. But Sri S. Sivappa was not recognised as the Leader of the Opposition within the meaning of the rules that are in force.

Sri M. NAGAPPA.—May I know whether *de facto* position is recognised or *de jure* position is recognised?

Mr. SPEAKER.—*de jure* is recognised and *de facto* is not recognised.

ಶ್ರೀ ಎಸ್. ಗೋಪಾಲಗೌಡ.—ತಾವು ಹೇಳಿದ ಸ್ಪಷ್ಟೀಕರಣದನಂತರ ನಾನು ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಸಂಯುಕ್ತ ವಿಧಾಯಕ ದಳವನ್ನು ವಿಸರ್ಜನೆ ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇಲ್ಲ.

Mr. SPEAKER.—I have never said it is dissolved. I simply said it is not recognised.

ಶ್ರೀ ಎಸ್. ಗೋಪಾಲಗೌಡ.—ವಿಸರ್ಜನೆ ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇಲ್ಲ.

Mr. SPEAKER.—How does that come in when I say I have not done it?

ಶ್ರೀ ಎಸ್. ಗೋಪಾಲಗೌಡ.—ಯಾರು ಸಂಯುಕ್ತ ವಿಧಾಯಕ ದಳವನ್ನು ಸ್ಥಾಪಿಸಿದರೋ, ರಚನೆ ಮಾಡಿದರೋ ಮತ್ತು ಅದನ್ನು ಒಪ್ಪಿಕೊಂಡಿದ್ದಾರೋ ಅವರೇ ಅದನ್ನು ವಿಸರ್ಜನೆ ಮಾಡಬೇಕೇ ಅಥವಾ ಇಟ್ಟುಕೊಳ್ಳಬೇಕೇ ಎನ್ನುವುದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅದು ಜೀವಂತವಾಗಿದೆ ಎಂದು ಶ್ರೀಕಂಠಯ್ಯನವರು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಲೀಗಲ ಮತ್ತು ಟೆಕ್ನಿಕಲ ಯಾರಾದರೂ ಒಬ್ಬರು ಬಿಟ್ಟು ಹೋದರೆ ಅಥವಾ ಇಬ್ಬರು ಬಿಟ್ಟು ಹೋದರೆ ಅಥವಾ 10 ಜನ ಬಿಟ್ಟುಹೋದರೆ ಆ ಅಸೋಸಿಯೇಷನ್ ಡಿಫಂಕ್ಟ್ ಆಗುವುದಿಲ್ಲ, ಅದಕ್ಕೆ ಕ್ರಮ ಇದೆ. ಆ ಕ್ರಮದ ರೀತಿಯಲ್ಲಿ ವಿಸರ್ಜನೆ ಮಾಡಬೇಕಾಗುತ್ತದೆ. ಅಲ್ಲಿಯತನಕ ಅದು ಇದೆ ಎಂತಲೇ ಬಾವಿಸಿಕೊಳ್ಳಬೇಕಾಗುತ್ತದೆ. ಇದು ಕಾನೂನು ರೀತ್ಯ ಇರತಕ್ಕ ವಿಷಯ ಅಂದಮೇಲೆ ನಾನು ಕೂಡ ಒಪ್ಪಿಕೊಂಡಿದ್ದೇನೆ. ಇದನ್ನು ಪುನರುಜ್ಜೀವನ ಹೇಗೆ ಮಾಡಬೇಕು, ನಾಯಕರು ಯಾರು, ಉಪನಾಯಕರು ಮತ್ತು ನಿಚೇತಕರು ಯಾರು ಆಗಿರಬೇಕು ಇತ್ಯಾದಿ ಇತ್ಯಾದಿ, ಪದಾಧಿಕಾರಿಗಳ ವಿಷಯದಲ್ಲಿ ವಿಚಾರ ಮಾಡುತ್ತಿದ್ದೇವೆ. ಅದು ತಮ್ಮ ಗಮನಕ್ಕೆ ಬಂದಿದೆ. ನಮಗೆ ಸ್ವಲ್ಪ ಸಮಯಬೇಕು, ನಮ್ಮ ನಾಯಕರು ಇಲ್ಲ, ಇತ್ಯಾದಿ ಇತ್ಯಾದಿ, ತಮ್ಮನ್ನು ಕೇಳಿಕೊಂಡಿದ್ದೇವೆ. ಆದುದರಿಂದ ಸಂಯುಕ್ತ ವಿಧಾಯಕ ದಳವನ್ನು ಇನ್ನೂ ವಿಸರ್ಜನೆ ಮಾಡಿಲ್ಲ. ಒಂದು ಸ್ಪಷ್ಟೀಕರಣ ಏನು ಎಂದರೆ ಮಾನ್ಯ ಸಿದ್ದವೀರಪ್ಪನವರನ್ನು ತಾವು ಏನು ಹೆಸರಿನಲ್ಲಿ ರೆಕಾಗ್‌ನೈಸ್ ಮಾಡಿದ್ದರೋ ಗೊತ್ತಿಲ್ಲ. Indicate.....

Mr. SPEAKER.—They have assumed the name of Congess (R).

ಶ್ರೀ ಎಸ್. ಗೋಪಾಲಗೌಡ.—ಕಾಂಗ್ರೆಸ್ (ಆರ್) ಪರವಾಗಿ ಅವರು ಮಾತನಾಡಬಹುದು. ಶ್ರೀ ಸಿದ್ದವೀರಪ್ಪನವರನ್ನು ಕಾಂಗ್ರೆಸ್ಸ್ (ಆರ್) ನ ನಾಯಕರಾಗಿ ಆರಿಸಿದ್ದಾರೆ. ಅದರ ಪರವಾಗಿ ಮಾತನಾಡಲು ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಅದಕ್ಕೆ ನಮ್ಮ ವಿರೋಧವಿಲ್ಲ. ನಮ್ಮಲ್ಲಿ ಅನೇಕ ಪಕ್ಷಗಳು ಇವೆ.

Mr. SPEAKER.—How much time does the hon. Member want?

ಶ್ರೀ ಎಸ್. ಗೋಪಾಲಗೌಡ.—ನಾನು ಒಂದು ಮಾತು ಹೇಳಿ ಮುಗಿಸುತ್ತೇನೆ. ಕಾಂಗ್ರೆಸ್ (ಆರ್) ನಾಯಕರಾಗಿರುವ ಶ್ರೀ ಸಿದ್ದವೀರಪ್ಪನವರು ನಮ್ಮಲ್ಲಿ ಇರತಕ್ಕಂಥ ಪಕ್ಷೇತರರ ಅನೇಕ ಪಕ್ಷಗಳ ಸದಸ್ಯರ ಪರವಾಗಿ ಅಥವಾ ಒಟ್ಟು ವಿರೋಧ ಪಕ್ಷದ ಪರವಾಗಿ ನಾಯಕರು ಅಲ್ಲವೆಂದು ಇಷ್ಟು ಹೇಳಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ನಾನು ಒಂದು ವಿಷಯ ಅರಿಕೆಮಾಡಿಕೊಳ್ಳಬೇಕೆಂದಿದ್ದೇನೆ. ತಮ್ಮನ್ನು 12-45 ಗಂಟೆಗೆ ನೋಡಿದೆ. ಈ ದಿವಸ ಸಂಯುಕ್ತ ವಿಧಾಯಕ ದಳದ ಜನರರ್ ಬಾಡಿ ಸೇರಿತ್ತು. ಅದಕ್ಕೆ 38 ಜನರು ಬಂದಿದ್ದರು. ಅಲ್ಲಿ ಏನೆಮಮ್ ಪ್ರೊಗ್ರಾಂ ಮತ್ತು ದಳದ ಅಂಗರಚನೆ ಒಪ್ಪಿಕೊಳ್ಳಲಾಯಿತು. ಇದನ್ನು ನಾನು ಮತ್ತು ಶರಣಗೌಡರು ತಮಗೆ ವರದಿ ಮಾಡಿದ್ದೇವೆ. ಇನ್ನು ಪದಾಧಿಕಾರಿಗಳನ್ನು ಯಾರನ್ನೂ ನೇಮಕಮಾಡಲಲ್ಲ. ಕಾರಣ ಶ್ರೀ ಶಿವಪ್ಪನವರು ಬರೋಡಾಕ್ಕೆ ಪ್ರಯಾಣಮಾಡಿದ್ದಾರೆ. ಇನ್ನು ಈ ಸಂಬಂಧವಾಗಿ ವಿಷಯ ಹೆಚ್ಚು ಚರ್ಚೆ ಮಾಡುವುದಕ್ಕೆ 12-30 ಗಂಟೆ ವೀರಿದ್ದರಿಂದ ಆಗಲಲ್ಲ. ಯಾವ ಪಕ್ಷದಲ್ಲಿ ಬಹುಮತ ಇದೆಯೋ ಮತ್ತು ಯಾರು ರುಜು ಮಾಡಿ ಕಾರ್ಯಕ್ರಮದ ಅಂಗರಚನೆ ಮತ್ತು ಪದಾಧಿಕಾರಿಗಳನ್ನು ಅರಿಸಿ ತಿಳಿಸುತ್ತಾರೋ ಅಂಥವರನ್ನು ರೆಕಾಗ್ನೈಸ್ ಮಾಡುತ್ತೇವೆ ಎನ್ನುವ ನರ್ಕ್ಯುಲರ್‌ನ್ನು ಸಭಾಧ್ಯಕ್ಷರು ನಮ್ಮ ಗಮನಕ್ಕೆ ತಂದ ಮೇಲೆ ಈಪೊತ್ತು ಬೆಳಿಗ್ಗೆ ಅದನ್ನೆಲ್ಲಾ ವಿವರಿಸಿ ಹೇಳಿದ್ದೇವೆ. ತಮಗೆ ಈಗಾಗಲೇ ಕನಿಷ್ಠ ಕಾರ್ಯಕ್ರಮ ಮತ್ತು ಅಂಗರಚನೆ ತಿಳಿಸಿದ್ದೇವೆ. ಮೂರು ಗಂಟೆಗೆ ಸಂಯುಕ್ತ ವಿಧಾಯಕ ದಳದ ವಿಶೇಷ ಸಭೆಯನ್ನು ಕರೆದು ಪದಾಧಿಕಾರಿಗಳನ್ನು ಚುನಾಯಿಸುವವರೆಗೆ ತಾವು ಈಗಿರುವ ಪರಿಸ್ಥಿತಿಯನ್ನು ಮುಂದುವರಿಸಬೇಕೆಂದು ಹೇಳಿದರೂ ಕೂಡ ನಾವು ಹೇಳಿದ್ದನ್ನೆಲ್ಲಾ ಉಲ್ಲಂಘಿಸಿ ಈಗ ತಮ್ಮ ನಿರ್ಧಾರವನ್ನು ಅನೌನ್ಸ್ ಮಾಡಿದರೆ ಅದಕ್ಕೆ ನಾನು ಏನು ಹೇಳಲಿ?

2-30 P.M.

Mr. SPEAKER.—The facts as stated by Sri L. Srikantiah are true. I have no preferences personally in this matter. The rules are there and I have to apply them mechanically without using my discretion. Here is a largest single party of 23 persons, and therefore they constitute the main opposition. If Sri Srikantiah were to give a bigger list of members, then that party has got to be recognised under the rules and I have no discretion in the matter. If that party consisted of more than 23 members, then it shall become the main opposition party and all other consequences will follow. That is the position. When Mr. Srikantiah stated this to me, I told him that I have decided to make an announcement to this effect immediately after Question Hour. He requested me that it should be postponed till the evening, till about 3-30 or 4 P.M. But I said, I could not delay any further from making this announcement. However I gave him an assurance that if he were to come with a list complying with all the requirements in proper time before the day's sitting is adjourned, I shall also make another announcement. Therefore, there is no need for any one to be anxious. So far as I am concerned I have no preferences and predilictions. I am here to apply the rules mechanically with respect to all parties and groups in this House.

Mr. Arakeri has made a representation. Probably he is the only member representing the Republican Party. But under the existing rules he cannot be recognised as a party. or a group.

Sri S. S. ARAKERI.—I represent the All India Republican Party which is a democratic party, It is an all-India Party and it is an insult to my party if you say that.

MR. SPEAKER.—The hon. Member should have some patience. He may be representing an all India Party like the Republican Party and it may be a democratic party. But I am concerned with the position of the party in the House and not outside. For being recognised as a Party, the rule is, there must be a minimum quorum strength; for recognising it as a group, three-fifths of quorum strength *i.e.*, about 13 members are necessary. Parties and groups which cannot muster a strength of 13, cannot function either as a group or a party in the House. Hon. Member may be the leader of a big party. He should cultivate some patience.

SRI M. NAGAPPA.—I could not follow the Speaker when he was pleased to say that Republican Party is not a party.

MR. SPEAKER.—In the House.

SRI M. NAGAPPA.—I am stating within the House. May I know what is the criteria for constituting a Party? If tomorrow from out of the Congress party 100 members sit on the other side and say they are a party, can you recognise them as a party? I fail to understand the meaning of a Party, whether they have a different ideology, whether they have to have a different symbol or flag?

MR. SPEAKER.—I am really surprised to hear this question from Sri M. Nagappa. I have given a copy of the rules to the hon. member. He must have studied the rules and followed them, an intelligent lawyer that he is. To state the history in short: Mr. Mavalankar in the year 1950 issued a regulation stating that any group or association of persons who have contested elections outside on the basis of a mani festo or a programme and having the same programme inside the House would be recognised as a Party if they had a quorum strength, for the purpose of proceedings of the House. But then, since 1967 elections, things have changed and various U. F. Government and U. F. Opposition parties have come into existence. The Presiding Officers considered this point and decided that we should not hereafter proceed on the basis of groups or parties who fight elections outside, but on the basis of the number of persons associating themselves in the House with a common programme, with a leadership and organisation and with a requisite quorum strength for a Party or three fifths the quorum strength for a group, and if a list of such members were submitted to the Speaker along with the signatures of Members constituting that party or group; then recognition may be given to such Party or group as the case may be. I am following this procedure. I am not concerned, whether they have a symbol or flag outside the House, I am also not concerned on what mani festo they have contested the election outside. All that is required is that the members should combine themselves into an association and have an organisation with a leader to function in the House.

SRI M. NAGAPPA.—What I want to know.....

Mr. SPEAKER.—I have stated my case. That is my ruling. I am not prepared to hear anybody.

(A number of Members stood up to speak)

Sri S. S. ARAKERI.—On a point of order, ಅಧ್ಯಕ್ಷರು ಎರಡು ಗಂಟೆಗಳ ಹಿಂದೆ ರಿಪಬ್ಲಿಕನ್ ಪಾರ್ಟಿ ಒಂದು ಪಾರ್ಟಿಯಲ್ಲವೆಂದು ಹೇಳಿದ್ದಾರೆ. ಆ ಪಾರ್ಟಿ ಪೊಲಿಟಿಕಲ್ ಪಾರ್ಟಿ ಅಲ್ಲವೆಂದು ಹೇಳಿದ್ದಾರೆ. ಅದನ್ನು ಪ್ರೊಸೀಡಿಂಗ್ಸ್‌ನಿಂದ ಎಕ್ಸ್‌ಪಂಜ್ ಮಾಡಬೇಕೆಂದು ಹೇಳುತ್ತೇನೆ. ತಾವು ನನ್ನ ಪಾರ್ಟಿಗೆ ಅವಮಾನ ಮಾಡಿದ್ದೀರಿ ಎಂದು ನಾನು ಹೊರಟು ಹೋಗುತ್ತೇನೆ. ವಾಕ್ ಔಟ್ ಮಾಡುತ್ತೇನೆ.

Mr. SPEAKER.—There is no point of order.

(Sri S. S. Arakeri withdrew)

[MR. DEPUTY SPEAKER in the Chair]

ಶ್ರೀ ಮಹದೇವ್ ಜಿ. ಬಣಕಾರ್.—ತಾವು ಇಲ್ಲಿಯವರೆಗೂ ಹೇಳಿದ್ದರಲ್ಲಿ ಎರಡು ಮೂರು ಅರ್ಥಗಳು ಬಂತು. ಒಂದು ಕಡೆ ಸಿಂಗಲ್ ಪಾರ್ಟಿಯಾಗಿ 23 ಸದಸ್ಯರುಗಳಿಳ್ಳ ಒಂದು ಪಟ್ಟಿ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಇನ್ನೊಂದು ಕಡೆ ಯುನೈಟೆಡ್ ಫ್ರಂಟ್ ಇನ್ನೂ ರೆಕಗ್ನೈಜ್ ಆಗಿಲ್ಲವೆಂದು ಹೇಳಿದ್ದೀರಿ. ಮತ್ತೊಂದು ಕಡೆ ಯುನೈಟೆಡ್ ಫ್ರಂಟ್‌ನವರು 37-38 ಹೆಸರುಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದೀರಿ.

ಉಪಾಧ್ಯಕ್ಷರು.—ಅವರು ಹಾಗೆ ಹೇಳಲಿಲ್ಲ.

ಶ್ರೀ ಮಹದೇವ್ ಜಿ. ಬಣಕಾರ್.—ತಾವು ಯಾರನ್ನಾದರೂ ನಾಮಕರ್‌ನ್ನಾಗಿ ಮಾಡಿ. ಎರಡೂವರೆ ಗಂಟೆಗೆ ಒಬ್ಬರನ್ನು ಡಿಕ್ಲೇರ್ ಮಾಡಿ, ಮೂರೂವರೆ ಘಂಟೆಗೆ ಇನ್ನೊಬ್ಬರನ್ನು ಡಿಕ್ಲೇರ್ ಮಾಡುವುದರಲ್ಲಿ ಅರ್ಥವಿಲ್ಲ. ಇನ್ನೊಂದು ಗಂಟೆಯಲ್ಲಿ ಇದು ತೀರ್ಮಾನವಾಗುವಾಗ ಈ ಸರ್ಕಾರಕ್ಕೆ ಈಗ ಬಂದಿರುವ ಆಪತ್ತಾದರೂ ಏನು ? ನಾಯಕರು ಮಾನ್ಯ ಶ್ರೀ ಶಿವಪ್ಪನವರಾದರೆಂದು ಹೇಳಿದರೇನು ಅಥವಾ ಮಾನ್ಯ ಶ್ರೀ ಸಿದ್ದವೀರಪ್ಪನವರಾದರೆಂದು ಹೇಳಿದರೇನು ? ಇನ್ನು ಒಂದು ಗಂಟೆಯಲ್ಲಿ ಇದು ತೀರ್ಮಾನವಾಗಲಿರುವಾಗ ಈಗ ವಿರೋಧ ಪಕ್ಷಕ್ಕೆ ಅವಮಾನ ಮಾಡುವ ವಿಧಾನವನ್ನು ತಾವು ಅನುಸರಿಸುತ್ತಿದ್ದೀರಿ. ಇದರಿಂದ ವಿರೋಧ ಪಕ್ಷಕ್ಕೆ ಬಹಳ ಅವಮಾನವಾಗುತ್ತದೆ. ನಾಯಕರನ್ನಾಗಿ ಮಾನ್ಯ ಶ್ರೀ ಸಿದ್ದವೀರಪ್ಪನವರನ್ನೇ ಮಾಡಿ ಅಥವಾ ಯಾರನ್ನಾದರೂ ಮಾಡಿ. ತಾವು ಮೂರುವರೆ ಗಂಟೆಗೆ ಇಲ್ಲಿ ಆ ವಿಚಾರವನ್ನು ಡಿಕ್ಲೇರ್ ಮಾಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಮಾನ್ಯ ಉಪಸಭಾಪತಿಯವರೇ, ಅಧ್ಯಕ್ಷರು ತುರ್ತಾಗಿ ಎದ್ದುಕೊಂಡು ಹೋದರು. ನಾನು ಏನೋ ಹೇಳಬೇಕೆಂದಿದ್ದೆ. ಈಗ ಈ ನಮ್ಮ ಎಸ್. ಪಿ. ಡಿ. ದಳವು ಮೂರು ವರ್ಷದಿಂದ ಮುಂದುವರಿಯುತ್ತಾ ಇತ್ತು. ಅವನ್ನು ನಡೆಸಿಕೊಂಡು ಬರುತ್ತಿದ್ದೆವು ಮತ್ತು ಅದಕ್ಕೆ ಮಾನ್ಯ ಶಿವಪ್ಪನವರು ನಾಯಕರಾಗಿದ್ದರು ಇತ್ತು ಒಂದು ಕಡೆ ಇವರು ಸಂಯುಕ್ತ ದಳವನ್ನು ರೆಕಗ್ನೈಸ್ ಮಾಡುವುದಿಲ್ಲವೆಂದು ಹೇಳುತ್ತಾರೆ. ಅದರ ಬಗ್ಗೆ ಒಂದು ವಿಚಾರವನ್ನು ನಾನು ಹೇಳುತ್ತೇನೆ. ಮಾನ್ಯ ಬಣಕಾರರು ಹೇಳಿದ ಹಾಗೆ, ತಾವು ಕಾಂಗ್ರೆಸ್ ಆರ್‌ನ್ನು ಸಿಂಗಲ್ ಲಾರ್ಜೆಸ್ಟ್ ಪಾರ್ಟಿ ಎಂದು ತಿಳಿದುಕೊಂಡು ಒಂದು ತೀರ್ಮಾನಕ್ಕೆ ಬಂದು, ಲೀಡರ್ ಆಫ್ ದಿ ಅಪೋಸಿಶನ್ ಇಂಥವರು ಎಂದು ಹೇಳಿದ್ದೀರಿ. ನಾವು 1967ನೇ ಇನವರಿಯಲ್ಲಿ ಸಭಾಪತಿಯವರಿಗೆ ಒಂದು ಲಿಸ್ಟನ್ನು ಕಳಿಸಿದ್ದೇವೆ. ನಮ್ಮ ಪಾರ್ಟಿಯಲ್ಲಿ 24 ಜನ ಸದಸ್ಯರು ಇದ್ದಾರೆಂದು ಅದಕ್ಕೆ ರುಜು ಹಾಕಿ ಕೊಟ್ಟಿದ್ದೇವೆ. ಈಗ ಈ ಸಿಂಗಲ್ ಪಾರ್ಟಿಯನ್ನು ವಿರೋಧ ಪಾರ್ಟಿ ಎಂದು ಹೇಳುವಾಗ ನಿಮ್ಮ ಪಾರ್ಟಿಯಲ್ಲಿ ಎಷ್ಟು ಜನರಿದ್ದಾರೆ, ಆ ಪಾರ್ಟಿ ಏನಾಯ್ತು ಎಂದು ಕೇಳಿಲ್ಲ. ಆ ಪಾರ್ಟಿಗೆ ಅವಾಗ ಏಕೆ ರೆಕಗ್ನೈಶನ್ ಕೊಟ್ಟಿಲ್ಲ ? ಈಗ ಈ 23 ಜನರಿರುವ ಸಿಂಗಲ್ ಪಾರ್ಟಿಯನ್ನು ಏಕೆ ರೆಕಗ್ನೈಸ್ ಮಾಡಬೇಕಾಗಿತ್ತು ? ಈಗ ಇದನ್ನು ತುರ್ತಾಗಿ ಮಾಡುವ ಕಾರ್ಯಕ್ರಮ ಏನು ಇತ್ತು ? ಯಾರದೋ ಒತ್ತಡಕ್ಕೆ ಬಲಿಯಾಗಿ ಈ ರೀತಿ ವರ್ತಿಸುತ್ತಿದ್ದಾರೆಂದು ನಾನು ಬಹಳ ವೇದನೆಯಿಂದ ಹೇಳಬೇಕಾಗಿದೆ.

ಉಪಾಧ್ಯಕ್ಷರು.—ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಈಗಲೂ ಅ ಲಿಸ್ಟ್ ಏನಿದೆ, ಅದನ್ನು ಕೊಟ್ಟರೆ ಕನ್ಸಿಡರ್ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಮಹದೇವ್ ಜಿ. ಬಣಕಾರ್.—ತಾವು ಸಿಂಗಲ್ ಲಾರ್ಜೆಸ್ಟ್ ಪಾರ್ಟಿ ಎಂದು ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ಅದರೆ ಪಿ.ಎಸ್.ಪಿ. ಯವರು ಮೊದಲು 24 ಜನರುಜು ಹಾಕಿ ಕೊಟ್ಟಿದ್ದಾರೆ. ಅದು ಏನಾಯ್ತು? ಎರಡೂವರೆ ಗಂಟೆಗೆ ಒಂದು ಡಿಕ್ಲೇರ್ ಮಾಡಿದಿರಿ ಮತ್ತೆ ನಾಲ್ಕೂವರೆ ಗಂಟೆಗೆ ಒಂದು ಡಿಕ್ಲೇರ್ ಮಾಡುತ್ತೀರಾ?

Sri K. H. PATIL.—A point of order, Sir. The Hon. Speaker has already given his decision. So, this House or any hon member has no right to challenge the decision once given. If they are praying for review; it is a different matter. A decision has been given by the Chair and the House has to respect it. Sri Gopal Gowda and others have elaborately explained their stand. By this representation, the Opposition will have no difficulty. We are all one; we are united whether Sri Siddaveerappa is the Opposition Leader or if even Sri Sivappa is continued as leader of the large party like P.S.P. Our harmony will never be affected; we will be one. We welcome the decision of the Chair and the hon. Members should not be allowed to question that decision.

ಶ್ರೀ ಎನ್. ಎ. ಚನ್ನೇಗೌಡ.—ಅಧ್ಯಕ್ಷರೇ. ಒಂದು ಪಕ್ಷಕ್ಕೆ ಮುನ್ನಣಿ ಕೊಡಬೇಕಾದರೆ ಅದಕ್ಕೆ ಒಂದು ಕಾಮನ್ ಪ್ರೋಗ್ರಾಂ ಸಂಖ್ಯಾ ಬಲ ಇರಬೇಕೆಂದು ಹೇಳಿದ್ದಾರೆ. ಅದೇ ಪ್ರಕಾರ ಇಂಡಿಕೇಟ್ ಸಂಖ್ಯಾ ಬಲ ಇದೆಯೆಂದು ಹೇಳಿ ತ್ತಾರೆ. ಕಾಂಗ್ರೆಸ್ (ಆರ್) ಮತ್ತು ಕಾಂಗ್ರೆಸ್ (ಒ) ಇವರೆಡರ ಕನಿಷ್ಠ ಕಾರ್ಯಕ್ರಮ ಒಂದೇ ಆಗಿರುವುದರಿಂದ ಏನು ವ್ಯತ್ಯಾಸ ಇದೆ? ಅದನ್ನು ಬೇರೆ ಪಕ್ಷವೆಂದು ಹೇಳುತ್ತೀರಾ?

ಶ್ರೀ ಬಿ. ಗುಂಡಣ್ಣ.—ಈಗ ಅಧ್ಯಕ್ಷರು ಹೇಳಿದ ಪ್ರಕಾರ ಕಾಂಗ್ರೆಸ್ (ಆರ್) ಅಪೊಸಿಶನ್ ಎಂದು ಪರಿಗಣನೆ ಮಾಡಬೇಕು. ಇದು ತಾತ್ಕಾಲಿಕವಾಗಿ ಮಾಡಬೇಕೇ? ಇದನ್ನು ಯಾರು; ನಿರ್ಧಾರ ಮಾಡಬೇಕೆಂದು ಕೇಳುತ್ತೇನೆ?

Mr. DEPUTY SPEAKER.—There is no force in the point of order.

ಶ್ರೀ ಅಜೀಜ್ ಸೇಠ್.—ಈಗ ಕಷ್ಟ ಏನೆಂದರೆ ಕಾಂಗ್ರೆಸ್ (ಆರ್) ಅಂದರೆ ಇಲ್ಲಿನ ಅಪೊಸಿಸಿನ್ ಪಾರ್ಟಿ. ರೂಲಿಂಗ್ ಪಾರ್ಟಿ ಕಾಂಗ್ರೆಸ್ (ಒ) ನಾವು ಇವರನ್ನು ಕಾಂಗ್ರೆಸ್ ಆರ್) ಎಂದು ಅಡ್ರೆಸ್ ಮಾಡಬೇಕೇ, ಅಥವಾ ಕಾಂಗ್ರೆಸ್ (ಒ) ಎಂದು ಅಡ್ರೆಸ್ ಮಾಡಬೇಕೇ? ಇದರ ಬಗ್ಗೆ ಒಂದು ಕ್ಲಾರಿಫಿಕೇಶನ್ ಮಾಡಬೇಕು.

Sri D B. KALMANKAR.—Sir, there was no hurry for making an announcement. The only question involved is that Samyukta Vidhavak Dal wanted more time to submit its list with other particulars. When that time was being extended for the last 2 or 3 days, there was no necessity for making any hasty announcement. No doubt, Sri K. H. Patil has stated that we in the Opposition are one. We have got the same respect for Sri Siddaveerappa. There was no need to announce the decision because again a decision is going to be taken after one or two hours. By this decision, where was the need to complicate matters? In the interest of the proper functioning of the Opposition, the House may be adjourned for some time. Then only this matter can be settled. At least, one hour's time may be given to settle the things amicably.

Mr. DEPUTY SPEAKER.—The announcement is already made. Why cannot the hon. Member give the list now?

Sri D. B. KALMANKAR.—The P. S. P. has submitted in 1967 a list of 24 members.

Mr. DEPUTY SPEAKER.—Why should the hon. Member worry about the list submitted in 1967 ?

ಶ್ರೀ ಬಿ. ಭಾನ್ಕರಶೆಟ್ಟಿ.—ಆವಾಗ ರೆಕಗ್ನೈಸ್ಡ್ ಪಾರ್ಟಿ ಎಂದು ಹೇಳಿಲ್ಲ. ಈಗ ಅದ್ನು ಆತುರವಾಗಿ ಮಾಡಬೇಕಾದ ಸಂದರ್ಭ ಏನಿತ್ತು ?

(Interruptions)

Mr. DEPUTY SPEAKER.—Order, order.

Sri M. RAMAPPA.—Sir, Though a decision is given by the Speaker, it may not be given effect to, for some time if the Opposition members have got a feeling that the decision should have been postponed for some time. With due respect to their feelings, it is better that giving effect to it, is postponed by one hour. If that is the general opinion of the Opposition Members, there is nothing wrong in the Deputy Speaker saying giving effect to the decision will be postponed by one hour.

†ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳಿದ್ದನ್ನು ಕೇಳಿದೆ, ಅವರು ಬಹಳ ವಿಚಿತ್ರವಾದ ವಾದ ಹಿಡಿದಹಾಗೆ ಕಾಣುತ್ತದೆ. ಸರ್ಕಾರಗಳು ಒಂದೊಂದು ದಿವಸಕ್ಕೆ ರಚನೆಯಾಗಿರುವುದು 24 ಗಂಟೆ ಕಾಲದಲ್ಲಿ ಹೊಸ ಸರ್ಕಾರ ಬಂದಿರುವುದು ಇಂತಹ ವಿದರ್ಶನ 67ನೇ ಇಸವಿ ಚುನಾವಣೆಯಿಂದ ಈಚೆಗೆ ನಾವು ನೋಡುತ್ತಾ ಇದ್ದೇವೆ. ಅವರಲ್ಲೂ ಇಲ್ಲಿ ಸರ್ಕಾರ ನಡೆಸುತ್ತಾ ಇರತಕ್ಕಂಥ ಪಾರ್ಟಿಗೆ ಸೇರಿದಂತಹ ಸದಸ್ಯರು ಇದನ್ನು ಪೋಸ್ಟ್‌ಪೋನ್ ಮಾಡಿ ಅಂತ ಹೇಳುವ ಹವ್ಯಾಸಕ್ಕೆ ಏಕೆ ಕೈ ಹಾಕಿದರೋ ಅರ್ಥವಾಗುತ್ತಿಲ್ಲ.

Sri M. RAMAPPA.—Sri D. B. Kalmankar said that it may be postponed. I do not say that it should be postponed.

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಅಧ್ಯಕ್ಷರು ಒಂದು ರೂಲಿಂಗ್ ಕೊಟ್ಟಿದ್ದಾರೆ. ಇನ್ನೊಂದು ಗಂಟೆಗೆ ಬದಲಾವಣೆ ಆಗಬಹುದು. 3 ದಿನದಲ್ಲಿ ಬದಲಾವಣೆ ಆಗಬಹುದು. ಸರ್ಕಾರವೇ ನಾಳೆ ಬದಲಾವಣೆ ಆಗಬಹುದು. ಹೀಗಿದೆ ಹಾಗಿದೆ ಅಂತ ಹೇಳಿ ಇದೆಲ್ಲಾ ಬೇಡ. ರೂಲಿಂಗ್ ಕೊಟ್ಟದ್ದು ಆಗಿದೆ, ಅದನ್ನು ಸ್ವಾಗತ ಮಾಡಬೇಕಾದ್ದು ನಮ್ಮ ಕರ್ತವ್ಯ. ನಾಳೆ ದಿವಸ ಮತ್ತೊಂದು ಪಾರ್ಟಿ ಸೇರಿ ನಾವು ಒಂದು ಪಾರ್ಟಿ ಅಂತ ಹೇಳಿದಾಗ ಅದನ್ನು ಯಾವ ರೀತಿ ಪರಿಗಣನೆ ಮಾಡಬೇಕೋ ಆ ರೀತಿ ಮಾಡುತ್ತಾರೆ. ಈಗ ಅಧ್ಯಕ್ಷರು ಕಾನೂನಿನ ಚೌಕಟ್ಟಿನೊಳಗೆ ಅವರ ಕರ್ತವ್ಯವನ್ನು ನಡೆಸಿದ್ದಾರೆ, ಈ ವಿಚಾರದಲ್ಲಿ ವ್ಯಾಖ್ಯಾನ ಆಗತ್ಯವಿಲ್ಲ ಎಂದು ನನ್ನ ಭಾವನೆ. ಇದನ್ನು ಪೋಸ್ಟ್‌ಪೋನ್ ಮಾಡುವುದು ಅರ್ಥವಿಲ್ಲದ ಮಾತು ಆದೀತು. ಸಾಯಂಕಾಲ ಮಾಡಬೇಕು, ಇನ್ನೂ ಬೇರೆಯವರು ಸೇರಬಹುದು, 35 ಜನ ಆಗಬಹುದು ಎಂದರೆ 35 ಅಲ್ಲ 40 ಜನ ಆಗಲಿ. ನಾಳೆ ಬೇರೆ ಇನ್ನೊಂದು ಅನೌನ್ಸ್‌ಮೆಂಟ್ ಮಾಡಲಿ, ಕಾನೂನು ರೀತ್ಯ ನಡೆಯೋಣ. ಶ್ರೀಮಾನ್ ಗೋಪಾಲಗೌಡರು ನಮ್ಮ ಪಾರ್ಟಿ ಅಭಿಪ್ರಾಯಗಳಿಗೆ ಅವರು ಲೀಡರ್ ಆಗಿ ಹೇಳುವುದು ಸಾಧ್ಯವಿಲ್ಲ ಎಂದು ಹೇಳಿದರು. ಕಾಂಗ್ರೆಸ್ (ಆರ್) ಪರವಾಗಿ ಅವರು ವಿರೋಧ ಪಕ್ಷದ ನಾಯಕರು ಆಗಬೇಕೆಂದು ಹೇಳಿದ್ದಾರೆಯೇ ಹೊರತು ಎಲ್ಲರ ಪರವಾಗಿ ಮಾತನಾಡುತ್ತಾರೆ ಎಂಬ ಮಾತನ್ನು ಯಾರೂ ಹೇಳುವುದಕ್ಕೆ ಹೋಗಿಲ್ಲ. ಮತ್ತೆ ಕೆಲವು ಮಿತ್ರರು ಹೇಳುತ್ತಾರೆ, ಕಾಮನ್ ಸಿಂಬಲ್ ಇದೆಯೇ, ಪ್ರೋಗ್ರಾಂ ಇದೆಯೇ ಅಂತ. ಇದು ಒಂದು ದೊಡ್ಡ ವ್ಯಾಖ್ಯಾನವೇ ಆಗಬಹುದು. ಎಸ್. ವಿ. ಡಿ. ಅನ್ನುವುದಕ್ಕೆ ಪ್ರತಿಯೊಂದಕ್ಕೂ ಸಿಂಬಲ್ ಇದೆಯೇ, ಪ್ರತಿಯೊಂದಕ್ಕೂ ಪ್ರೋಗ್ರಾಂ ಇದೆಯೇ ಎಂಬುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ದಯಮಾಡಿ ಮುಂದಿನ ಕಾರ್ಯಗಳನ್ನು ನಡೆಸುವುದು ಸೂಕ್ತ ಎಂಬುದು ನನ್ನ ವಿನಂತಿ.

†ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಉಪಸಭಾಧ್ಯಕ್ಷರೇ, ಅಧ್ಯಕ್ಷರು ಇದೀಗ ಸ್ವಲ್ಪ ಸಮಯದ ಮುಂಚೆ ಈ ಮಾನ್ಯ ಸಭೆಯ ವಿರೋಧ ಪಕ್ಷದ ನಾಯಕರು ಈ ಗಳಿಗೆಯಿಂದ ಶ್ರೀಮಾನ್ ಸಿದ್ಧವೀರಪ್ಪನವರು ಆಗಿರುತ್ತಾರೆ ಅನ್ನುವಂತಹ ಒಂದು ನಿರ್ಣಯ ನೀಡಿದ್ದಾರೆ. ಮತ್ತು

ನಾನು ಕಳೆದ ಹತ್ತಾರು ಒಂಭೊ ಹುಗಿಕ್ಕಿಲು ವರ್ಷದಿಂದ ಈ ಮಾನ್ಯ ಸಭೆಯ ಸಾಯಕನಾಗಿ ಕೆಲಸ ಮಾಡುತ್ತಾ ಇದ್ದೇನೆ, ಈ ನಿರ್ಣಯದ ಪ್ರಕಾರ ಈ ಗಳಿಗೆಗೆ ಶ್ರೀಮಾನ್ ಶಿವಪ್ಪನವರು ವಿರೋಧ ಪಕ್ಷದ ನಾಯಕರು ಅಲ್ಲ. ಅವರಿಗೆ ಬದಲಾಗಿ ಅವರ ಸ್ಥಳದಲ್ಲಿ ಶ್ರೀಮಾನ್ ಸಿದ್ದವೀರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಈ ಸಭೆಯ ನಾಯಕನಾಗಿ ಶ್ರೀಮಾನ್ ಶಿವಪ್ಪನವರ ಬಗ್ಗೆ ಕೆಲವು ಮಾತುಗಳನ್ನು ಹೇಳುವುದು ಅವಶ್ಯಕ. ಇದೇ ರೀತಿಯಿಂದ ಹೊಸದಾಗಿ ವಿರೋಧ ಪಕ್ಷದ ನಾಯಕರಾದ ಸಿದ್ದವೀರಪ್ಪನವರ ಬಗ್ಗೆ ಕೂಡ ಕೆಲವು ಮಾತುಗಳನ್ನು ಹೇಳುವುದು ನನ್ನ ಧರ್ಮ, ನನ್ನ ಕರ್ತವ್ಯ ಎಂದು ತಿಳಿದುಕೊಂಡು ಎದ್ದು ನಿಂತಿದ್ದೇನೆ.

ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿದೆ, ಕಳೆದ 8 ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿ ಶ್ರೀಮಾನ್ ಶಿವಪ್ಪನವರು ವಿರೋಧ ಪಕ್ಷದ ನಾಯಕರಾಗಿ ಒಳ್ಳೆಯ ಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ. ಅವರು ಪ್ರಜಾಸೋಷಿಯಲಿಸ್ಟ್ ಪಕ್ಷದ ಅಧ್ಯಕ್ಷರು ಮತ್ತು ನಾಯಕರಾಗಿದ್ದರು, ವಿರೋಧ ಪಕ್ಷದ ನಾಯಕರು ಅಂತ ನಾವೆಲ್ಲರೂ ಒಪ್ಪಿಕೊಂಡು ಈ ಸಭೆಯಲ್ಲಿ, ಈ ಮನೆಯಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಾ ಇದ್ದೇವೆ. ಅವರು ಎಸ್. ವಿ. ಡಿ. ನಾಯಕರಾಗಿದ್ದಾರೆ. ಡಿಫ್ಯಾಕ್ಟೋ ನಾಯಕರಾಗಿದ್ದಾರೋ, ಡಿಜ್ಯೂರ್ ನಾಯಕರಾಗಿದ್ದಾರೋ ಅದು ಪ್ರಶ್ನೆಯಲ್ಲ. ನಾನು ಇವತ್ತು ಆ ಪ್ರಶ್ನೆಗೆ ಹೋಗುವುದು ಅಷ್ಟು ಸರಿಯಿಲ್ಲ ಎಂದು ನನಗನಿಸುತ್ತದೆ. ಕಳೆದ 8 ವರ್ಷಗಳಿಂದ ಅವರ ಜೊತೆಯಲ್ಲಿ ಅನೇಕ ಸಲ ಕಾರ್ಯಕಲಾಪಗಳನ್ನು ಮಾಡುವಂತಹ ಅವಕಾಶ ಸಿಕ್ಕಿದೆ. ಈಗಾಗಲೇ ಹೆಚ್ಚು ಸಮಯವಾಗಿರುವುದರಿಂದ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಬಹಳಷ್ಟು ಅಭಿಮಾನದಿಂದ, ಸಂತೋಷದಿಂದ ಈ ಮಾತು ಹೇಳಬಲ್ಲೆ, ಕಳೆದ 8 ವರ್ಷಗಳಿಂದ ಶ್ರೀಮಾನ್ ಶಿವಪ್ಪನವರು ವಿರೋಧಪಕ್ಷದ ನಾಯಕರಾಗಿ ಒಳ್ಳೆಯ ನಾಯಕರಾಗಿ, ಉತ್ಕೃಷ್ಟವಾದ ಸೇವೆ ಸಲ್ಲಿಸಿದ್ದಾರೆ. ಈ ಮನೆಯ ಕಾರ್ಯಕಲಾಪಗಳನ್ನು ನಡೆಸುವುದರಲ್ಲಿ ಬಹಳಮಟ್ಟಿಗೆ ಅವರು ಸಹಕರಿಸಿದ್ದಾರೆ. ಮತ್ತು ಈ ಮನೆಯ, ಸಭೆಯ ಘನತೆ, ಗೌರವ ಎತ್ತಿ ಹಿಡಿಯುವುದಕ್ಕೆ ತಮ್ಮ ವಿಶ್ವಪ್ರಯತ್ನ ಮಾಡಿದ್ದಾರೆ. ಅವರ ಬಗ್ಗೆ ಇವತ್ತು ಈ ವಿಚಾರಗಳನ್ನು ಹೇಳುತ್ತೇನೆ ಅಂತ ಅಲ್ಲ. ಹೊಂಗಡೆಯೂ ಕೂಡ ನಾನು ಅನೇಕ ಸಲ ಇವತ್ತು, ನಮ್ಮ ರಾಜ್ಯದಲ್ಲಿ ಒಬ್ಬ ವಿರೋಧಪಕ್ಷದ ನಾಯಕರು ಇದ್ದಾರೆ ಅನ್ನುವಂತಹ ವಿಚಾರವನ್ನು ಹೇಳಿದ್ದೇನೆ. ಅವರು ವಿದೇಶ ಪ್ರವಾಸ ಮಾಡುವ ಮುಂದೆಯೂ ಕೂಡ ಅವರ ಗೌರವಾರ್ಥವಾಗಿ ಏರ್ಪಡಿಸಿದ ಔತಣ ಕೂಟದಲ್ಲೂ ಅವರಲ್ಲಿದ್ದ ಗುಣದ ಬಗ್ಗೆ, ಅವರಿಂದ ಏನು ನಮ್ಮ ರಾಜ್ಯಕ್ಕೆ ಆಶೋತ್ತರಗಳು ಇವೆ, ಇದೆಲ್ಲಾ ವಿಚಾರಗಳನ್ನು ಹೇಳಿದ್ದೇನೆ. ಅವರು ಬಹಳಮಟ್ಟಿಗೆ ನಮ್ಮ ಜೊತೆಯಲ್ಲಿ ಸಹಕಾರಮಾಡಿದ್ದಾರೆ. ಅನೇಕ ಸಲ ಇದೇ ಮನೆಯಲ್ಲಿ ಬಿಸಿ ಬಿಸಿ ಚರ್ಚೆಯಾಗಿದೆ. ಬಹಳಷ್ಟು ಜೋರಾಗಿ ಮಾತಾನಾಡಿದ್ದಾರೆ. ವಿರೋಧ ಪಕ್ಷದ ನಾಯಕರಾಗಿ ಏನು ಕರ್ತವ್ಯ ನಿರ್ವಹಣೆ ಮಾಡಬೇಕಾಗಿತ್ತೋ ಅದೆಲ್ಲಾ ಮಾಡಿದ್ದಾರೆ. ಅದರ ಜೊತೆಯಲ್ಲಿ ಈ ಮಾನ್ಯ ಸಭೆಯ ಘನತೆ, ಗೌರವಗಳನ್ನು ಮತ್ತು ಯಾವ ಪಕ್ಷವನ್ನು ಅವರು ಪ್ರತಿನಿಧಿಸುತ್ತಾ ಇದ್ದಾರೋ ಅದರ ಘನತೆ, ಗೌರವಗಳನ್ನು ಎತ್ತಿ ಹಿಡಿಯುವುದಕ್ಕೆ ಅವರು ಬಹಳಮಟ್ಟಿಗೆ ಪ್ರಯತ್ನ ಮಾಡಿದ್ದಾರೆ. ಅದಕ್ಕೆ ಇವತ್ತು ಈ ಸಭೆಯ ನಾಯಕನಾಗಿ ಅವರ ಬಗ್ಗೆ ಈ ಕೆಲವು ವಿಚಾರಗಳನ್ನು ಹೇಳಬೇಕಾದ್ದು ಅವಶ್ಯಕ ಅಂತ ತಿಳಿದುಕೊಂಡು ನಾನು ಹೇಳಿದ್ದೇನೆ.

ಇನ್ನು ಹೊಸದಾಗಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಸಿದ್ದವೀರಪ್ಪನವರ ಬಗ್ಗೆ. ಅವರು ವಿರೋಧ ಪಕ್ಷದ ನಾಯಕರಾಗಿರುವಂಥದ್ದನ್ನು ನಾನು ಸಹೃದಯದಿಂದ ಸ್ವಾಗತಿಸುತ್ತೇನೆ. ನಾನು ಮೊನ್ನೆ ನನ್ನ ಉತ್ತರದಲ್ಲಿ ಹೇಳುತ್ತಾ ಇದ್ದೆ ಅವರು ಹಿರಿಯರು ಇದ್ದಾರೆ, ಅವರಿಗೆ ನನ್ನಷ್ಟೇ ವಯಸ್ಸಿನವರು ಮಕ್ಕಳು ಇದ್ದಾರೆ. ಅವರು ವಯಸ್ಸಿನಲ್ಲಿ ಹಿರಿಯರು ಅಷ್ಟೇ ಅಲ್ಲ, ಸಾಕಾದಷ್ಟು ಅನುಭವಿಕರೂ ಆಗಿದ್ದಾರೆ. ಸರ್ಕಾರದ ಕಾರ್ಯಗಳನ್ನು, ಕಾರ್ಯಭಾರಗಳನ್ನು ನಿರ್ವಹಿಸಿಕೊಂಡು ಕೆಲಸ ಮಾಡಿದಂತಹ ಸಾಕಾದಷ್ಟು ಅನುಭವ ಅವರಿಗೆ ಇದೆ. ಈ ಸರ್ಕಾರ ನಡೆಸಬೇಕಾದರೆ ಏನು ಕಷ್ಟಗಳು ಬರುತ್ತವೆ, ಸರ್ಕಾರದ ಮುಂದೆ ಇರತಕ್ಕ ಜವಾಬ್ದಾರಿ ಎಷ್ಟು ಕಟ್ಟುತರ ವಾದದ್ದು ಎಂಬ ಅರಿವು ಅವರಿಗೆ ಸಂಪೂರ್ಣವಾಗಿದೆ. ಅವರು ವಿರೋಧ ಪಕ್ಷದ ನಾಯಕರಾಗಿ ನನಗೆ ಸಂಪೂರ್ಣ ಸಹಕಾರ ನೀಡುತ್ತಾರೆ ಎಂಬ ಭರವಸೆ ನನಗೆ ಇದೆ. ಮತ್ತು ಈ ಸಭೆಯ ನಾಯಕನಾಗಿ ಮತ್ತು ಮುಖ್ಯಮಂತ್ರಿಯಾಗಿ ಅವರಿಗೂ ಕೂಡ ಸಂಪೂರ್ಣ ಸಹಕಾರ ನೀಡುವಂತಹದು ನನ್ನ ಧರ್ಮ, ನನ್ನ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇವೆ. ನಾನೆಲ್ಲರೂ ಸೇರಿ ಈ ಮಾನ್ಯ ಸಭೆಯ ಕಾರ್ಯಕಲಾಪಗಳು ಸುಗಮವಾಗಿ ಸಾಗುವಂತೆ, ಈ ಮಾನ್ಯ ಸಭೆಯ ಗೌರವ, ಪ್ರತಿಷ್ಠೆ, ಉಳಿಸಿಕೊಳ್ಳುವುದು ಅಷ್ಟೇ ಅಲ್ಲ ಬೆಳೆಸಿಕೊಂಡು ಹೋಗುವಂತಹ ಪ್ರಯತ್ನ ಮಾಡಬೇಕೆಂದು ಹೇಳಿ ಇವತ್ತು ಮಾನ್ಯ ಸಿದ್ದವೀರಪ್ಪನವರನ್ನು ತುಂಬಿದ ಹೃದಯದಿಂದ ಸ್ವಾಗತಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

3-00 P. M.

†ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಉಪಧ್ಯಕ್ಷರೇ, ಇರುವರೆಗೂ ನಡೆದಂಥ ಕಾರ್ಯಕಲಾಪಗಳನ್ನು ನೋಡಿ ಅನೇಕ ಭಾವನೆಗಳು ನನ್ನಲ್ಲಿ ಮಾಡಿವೆ. ಒಂದು ವಿಚಾರವನ್ನು ಹೇಳುತ್ತೇನೆ. ನಾನು ಯಾವತ್ತಿಗೂ ಯಾವ ಸ್ಥಾನವನ್ನಾಗಲಿ ಎಂದೂ ಅಪೇಕ್ಷೆ ಪಟ್ಟವನಲ್ಲ. ಅದಾಗಿ ಬಂದ ಕೆಲಸವನ್ನು ನನ್ನ ಶಕ್ತಿ, ಯೋಗ್ಯತೆ ಮೀರಿ ಮಾಡಲಿಕ್ಕೆ ಪ್ರಯತ್ನ ಪಟ್ಟಿದ್ದೇನೆಂದು ಅಷ್ಟು ಹೇಳುತ್ತೇನೆ ಈ ಹೊತ್ತಿನ ದಿವಸ ನಾನೇನೂ ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿ ಎಂದು ಯಾರನ್ನೂ ಕೇಳಿಲಿಲ್ಲ. ನಮ್ಮ ಪಕ್ಷದವರು ನನ್ನನ್ನು ನಾಯಕನನ್ನಾಗಿ ಆರಿಸಿದಾಗ ನಾನು ಅಧ್ಯಕ್ಷರಿಗೆ ಬರೆಯುವುದಕ್ಕೆ ಕಾರಣವಾಯಿತು. 19ನೇ ತಾರೀಖು ನಮ್ಮ ಸಭೆಯಲ್ಲಿ ತೀರ್ಮಾನವಾದ ಮೇರೆಗೆ 20ನೇ ತಾರೀಖು ನಾನು ಅಧ್ಯಕ್ಷರಿಗೆ ಒಂದು ಕಾಗದ ಬರೆದು, ಈ ರೀತಿ ನಮ್ಮದು ಒಂದು ಪಕ್ಷ ನನ್ನನ್ನು ನಾಯಕನನ್ನಾಗಿ ಆರಿಸಿದೆ, ಇಷ್ಟು ಜನ ಸದಸ್ಯರಿದ್ದಾರೆ ಎಂದು ತಿಳಿಸಿದೆ ಮೇಲೆ ಇನ್ನೂ ಕೆಲವು ಕಾರ್ಯಕ್ರಮ ಕೇಳಿದರು. ಅದನ್ನೆಲ್ಲ 21ನೇ ತಾರೀಖು ಕೊಟ್ಟೆ. ಆಮೇಲೆ ಇಲ್ಲಿಯವರೆಗೂ ನೀವು ಮಾಡಿ, ಈ ಹೊತ್ತೇ ಮಾಡಿ, ಈಗಲೇ ಮಾಡಿ ಎನ್ನತಕ್ಕ ಒತ್ತಡವನ್ನು ನಾವು ಯಾವತ್ತಿಗೂ ತರಲಿಲ್ಲ. ನನಗೆ ಗೊತ್ತಿತ್ತು, ಏನು ನಡೆಯುತ್ತಿದೆ ಎಂದು ನನ್ನ ಕೆಲವು ಹಿರಿಯರು ಸ್ನೇಹಿತರಾದ ಗೋಪಾಲ ಗೌಡರು ಮತ್ತು ಇತರ ಸ್ನೇಹಿತರು ಸಂಯುಕ್ತ ವಿಧಾಯಕ ದಳವನ್ನು ಮಾಡಬೇಕೆಂಬ ಪ್ರಯತ್ನ ದಲ್ಲದ್ದಾರೆಂದು ತಿಳಿದು ನಾನು ಇದನ್ನು ಒತ್ತಾಯ ಮಾಡದೆ ನುಮ್ಮನೆ ಇದ್ದೆ. ಕಾರಣವೇನೆಂದರೆ ನನ್ನನ್ನು ನಾಯಕನನ್ನಾಗಿ ಆರಿಸುವುದು ಒಂದು ಪಕ್ಷ. ಆ ಪಕ್ಷಕ್ಕೆ ನಾನು ನಾಯಕನೇ ಹೊರತು ಬಾಕಿಯವರಿಗೆ ನಾಯಕನಲ್ಲ, ಆ ರೀತಿಯಿಂದ ನಾನು ಹೇಳಿಕೊಳ್ಳಲೂ ಇಲ್ಲ. ಇದನ್ನು ಮಾನ್ಯ ದೇವರಾಜ ಅರಸ್ ಅವರು ಸೃಷ್ಟೀಕರಿಸಿದ್ದಾರೆ. ಆ ಮೇಲೆ ಈ ಹೊತ್ತಿನ ದಿವಸ ಕೆಲವರು ತಿಳಿದು ಕೊಂಡಿರಬಹುದು, ವಿರೋಧ ಪಕ್ಷದಲ್ಲಿ ಏನೂ ಸಾಧನೆ ಮಾಡಲಾರದೆ ನಾವು ಹೊಸ ಪಕ್ಷದವರು ಈ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು. ಈಗ ನಡೆದಂಥ ಪ್ರತಿಕ್ರಿಯೆಯಿಂದ ನನ್ನ ಮನಸ್ಸಿಗೆ ನೋವಾಗಿರುವಷ್ಟು ಇನ್ನು ಯಾರ ಮನಸ್ಸಿಗೂ ಆಗಿರಲಾರದು. ಕಳೆದ ಮೂರು ವರ್ಷಗಳಿಂದ ವಿರೋಧ ಪಕ್ಷವನ್ನು ಸಂಘಟಿಸಿ ಅದನ್ನು ಡೀಜೂರ್ ಎಂದು ಕರೆಯಿರಿ, ಡೀಫ್ಯಾಕ್ಟೋ ಎಂದು ಕರೆಯಿರಿ, ಅದು ಒಂದು ವಿರೋಧ ಪಕ್ಷವಾಗಿ ಕೆಲಸ ಮಾಡಿಕೊಂಡು ಬಂತು ಶ್ರೀಮಾನ್ ಶಿವಪ್ಪನವರು ಅತ್ಯಂತ ಮಾನ್ಯ ಸ್ನೇಹಿತರು, ಬಹಳ ವರ್ಷಗಳಿಂದ ಅವರನ್ನು ಬಲ್ಲೆ. ನಾನು ಹಿಂದೆ ಒಂದು ಸಾರಿ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದಂತೆ 'he is a perfect gentlemen' ಇದರಲ್ಲಿ ಅನುಮಾನವಿಲ್ಲ. ಯೂನಿವರ್ಸಿಟಿ ಸಿಂಡಿಕೇಟಿನಲ್ಲಿ ಅವರ ಜೊತೆಗೆ ಕೆಲಸ ಮಾಡಿದ್ದೇನೆ. ಕಳೆದ ಮೂರು ನಾಲ್ಕು ದಿವಸಗಳಿಂದಲೂ ಅವರಿಗೆ ಹೇಳಿದೆ, ಈಗ ಯಾರಾದರೂ ನಿಮ್ಮನ್ನು ನಾಯಕರನ್ನಾಗಿ ಆರಿಸಿದರೆ ನನಗೆ ಅಗತಕ್ಕ ಸಂತೋಷ ಇನ್ನು ಯಾರಿಗೂ ಆಗುವುದಿಲ್ಲ. ಒಂದುವೇಳೆ ಶ್ರೀಮಾನ್ ಗೋಪಾಲಗೌಡರು ಅಥವಾ ಶಿವಪ್ಪನವರು ನಾಯಕರು ಎಂದು ಹೇಳಿದ್ದರೆ ನಾನು ತುಂಬಿದ ಹೃದಯದಿಂದ ಸ್ವಾಗತಿಸುತ್ತಿದ್ದೆ. ಪತಕ್ಕೋಸ್ಕರ ಈ ಮಾತು ಹೇಳುತ್ತೇನೆಂದರೆ ವಿರೋಧ ಪಕ್ಷದವರಾದ ಪೈಮ್ಲರ ಮೇಲೂ ಒಂದು ಜವಾಬ್ದಾರಿ ಇದೆ. ಈ ಹೊತ್ತು ನಾವೆಲ್ಲರೂ ಒಗ್ಗಟ್ಟಾಗಿ ಒಂದು ಕೆಲಸವನ್ನು ಮಾಡುವುದಕ್ಕೆ ಕಷ್ಟವಿರಬೇಕಾದರೆ, ಅನೇಕ ಕಾರಣಗಳಿಂದ ಇಲ್ಲಿ ಬಹು ವಿಧವಾದ ರಾಜಕೀಯ ಪಕ್ಷಗಳು ಇವೆ. ಭಿನ್ನಭಾವನೆಗಳು ಇರುವಂಥ ಪಕ್ಷಗಳು ಇರುವ ಕಡೆಗಳಲ್ಲಿ ಪೋಲರೈಸೇಷನ್ ಆಫ್ ಪಾರ್ಟೀಸ್ ಎಂದು ಮಾಡಿಕೊಂಡು ಒಂದೇ ರೀತಿಯ ಕಾರ್ಯಕ್ರಮವನ್ನು ಹೊಂದಿರುವ ಜನ ಹೆಚ್ಚು ಹೆಚ್ಚಾಗಿ ಒಂದು ಗುಂಪಾಗಿ ಆಗುತ್ತ ಹೋಗುವುದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದು ಎಂದು ಈ ದೇಶದಲ್ಲಿರುವ ರಾಜಕಾರಣಿಗಳೆಲ್ಲರೂ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಅದು ದೇಶದಲ್ಲಿ ಎಲ್ಲ ಕಡೆಯೂ ನಡೆಯುತ್ತಿದೆ ಇಡೀ ನಮ್ಮ ರಾಜ್ಯದಲ್ಲಿ, ಹಿಂದೂ ಸ್ಥಾನದಲ್ಲಿ ಎಲ್ಲ ಕಡೆಯಲ್ಲಿ ಇಂಥ ಪರಿಸ್ಥಿತಿಯನ್ನು ನಾನು ನೋಡುತ್ತಿದ್ದೇವೆ.

ಶ್ರೀಮಾನ್ ಗೋಪಾಲಗೌಡರು ಒಂದು ಮಾತು ಹೇಳಿದರು. ಅವರಿಗೆ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಅದೇ ರೀತಿಯಿಂದ ಈ ಸಭೆಯ ನಾಯಕರಾದ ವೀರೇಂದ್ರ ಪಾಟೀಲರು ಹೇಳಿದರು. ನಮ್ಮ ಕರ್ತವ್ಯವನ್ನು, ನಾವು ಮಾಡಬೇಕಾದುದನ್ನು ಯಾವ ದೃಷ್ಟಿಯಿಂದ ಮಾಡಬೇಕೋ ಹಾಗೆ ಮಾಡುತ್ತೇವೆಯೇ ಹೊರತು ವೈಯಕ್ತಿಕವಾಗಿ ನಾವು ಕೆಲಸ ಮಾಡಬೇಕಾದುದಿಲ್ಲ. ವಿರೋಧಪಕ್ಷದವರ ಕರ್ತವ್ಯ ಯಾವರೀತಿ ಇದೆ, ಈ ಸರ್ಕಾರದ ವಿಚಾರದಲ್ಲಿ ಏನೇನು ಕಾರ್ಯಕ್ರಮಗಳನ್ನು ನಾವು ಸರ್ಕಾರವನ್ನು ಟೀಕೆ ಮಾಡುವುದರಲ್ಲಿ ತೆಗೆದುಕೊಳ್ಳಬೇಕು ಅದನ್ನು ಮಾಡುತ್ತೇವೆ ಮತ್ತು ರಾಷ್ಟ್ರಾಂಗದತ್ರಪಾದ ನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಾನು ಇನ್ನೊಂದು ಸಾರಿ ವಿಶದಪಡಿಸುತ್ತೇನೆ, ನನ್ನ ಪಕ್ಷವನ್ನು ಮಾತ್ರ ನಾನು ಈ ಸಭೆಯಲ್ಲಿ ಪ್ರತಿನಿಧಿಸುತ್ತೇನೆ, ಹಿಂದೆ ಒಂದು ಸಾರಿ ಹೇಳಿದೆ, ನ್ಯೂಜೆರೆಂಡ್, ಆಸ್ಟ್ರೇಲಿಯಾ ಮತ್ತು ಬೇರೆ

ಕಡೆಗೆ ಇರುವ ರಾಷ್ಟ್ರಗಳಲ್ಲಿ ಮಲ್ಟಿಪರ್ ಪಾರ್ಟೀಸ್ ಇವೆ. ಅಲ್ಲಿ ಕೆಲವು ತತ್ವಗಳ ಮೇಲೆ ಮಾಡಿ ಕೊಂಡಿರುವಂಥ ಒಪ್ಪಂದ ಪ್ರಕಾರ ಶಿಸ್ತಿಗಾಗಿ ಕೆಲವು ತತ್ವಗಳ ಆಧಾರದಮೇಲೆ ಒಂದುಗೂಡಬೇಕಾದ ಪಕ್ಷಗಳಿಗೂ ಕೂಡ ನಾವು ಇಲ್ಲಿ ಮಾನ್ಯ ಕೊಡಬೇಕಾದ ಅವಶ್ಯಕತೆ ಬಂದರೂ ಬರಬಹುದು. ಅದನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದನ್ನು ನಾನು ಹಿಂದೆ ಒಂದುಸಾರಿ ಹೇಳಿದ್ದೇನೆ ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿದ ಮಾತ್ರಕ್ಕೆ ನನಗೆ ಗರಿ ಕಟ್ಟಿಲ್ಲ, ಅಂಥ ಸ್ಥಾನವನ್ನು ಹೆಮ್ಮೆಯ ಸ್ಥಾನವೆಂದು ನಾನು ತಿಳಿದುಕೊಂಡಿಲ್ಲ. ಬಹುಶಃ ನನಗಿಂತ ಹೆಚ್ಚಿನ ದೃಷ್ಟಿಯಲ್ಲಿ ಶ್ರೀಮಾನ್ ಶಿವಪ್ಪ ನವರು ಎಲ್ಲರ ಪ್ರೀತಿ ಪಾತ್ರರಾಗಿ ಆ ಜಾಗದಲ್ಲಿ ಕುಳಿತುಕೊಂಡಿದ್ದರು. ಅದುದರಿಂದ ನಾನು ಈಗಲಾದರೂ ಹೇಳುವುದು ಇಷ್ಟೆ. ಇದು ಅನಿರೀಕ್ಷಿತ. ನಮ್ಮನ್ನು ಲೆಕ್ಕಕ್ಕೆಸ್ ಮಾಡಿ ಎಂದು ನಾವು ಕೇಳಿದೆವು. ಅದಕ್ಕೆ ಕಾರಣವೇನೆಂದರೆ ಹೋದ ಸಲ ಆ ಕಡೆಗೆ ಇದ್ದ ಮಾನ್ಯ ಸದಸ್ಯರು ಕೆಲವರು ನಮ್ಮ ಪಕ್ಷದವರು ಕುಳಿತುಕೊಂಡು ವಿಚಾರದಲ್ಲಿ ವ್ಯಂಗವಾಗಿ ಹೇಳಿದ್ದರಿಂದ ನಮ್ಮ ಗುಂಪು ಬೇರೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡಿ ಎಂದು ಕೇಳಿದೆವು. ಇದರಲ್ಲಿ ಯಾರೂ ಏನೂ ತಪ್ಪು ತಿಳಿದುಕೊಳ್ಳಬೇಕಾಗಿಲ್ಲ. ತಮ್ಮೆಲ್ಲರ ಸಹಕಾರವನ್ನೂ ಕೋರುತ್ತೇನೆ ಎಂದು ಮಾತ್ರ ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅಧ್ಯಕ್ಷರು ಒಂದು ಪ್ರಕಟನೆಯನ್ನು ಸಭೆಯ ಮುಂದೆ ಇಟ್ಟು ಸ್ವಲ್ಪಮಟ್ಟಿಗೆ ಕೆಲವು ಅನುಮಾನಗಳು ಮುಖ್ಯತಃ ಶ್ರೀಮಾನ್ ವಿರೇಂದ್ರ ಪಾಟೀಲರ ನಾಯಕತ್ವದಲ್ಲಿ ಈ ರಾಜ್ಯದಲ್ಲಿ ಯಾವ ಮಂತ್ರಿಮಂಡಲ ಕಾರ್ಯ ಕ್ರಮ ಮಾಡುತ್ತಿದೆ ಅವರ ವಿರುದ್ಧ ಯಾರು ಯಾರು ಈ ಮನೆಯ ಸದಸ್ಯರಿದ್ದಾರೆ, ಅವರೆಲ್ಲರನ್ನೂ ಪೊವಲನೆಯವಾಗಿ ವಿರೋಧ ಪಕ್ಷದವರು ಎಂದು ಅರ್ಥ ಮಾಡಿಕೊಳ್ಳುವುದು, ಕರೆಯುವುದು ಸಹಜ ಮತ್ತು ಸ್ವಾಭಾವಿಕ. ಅವುಗಳಿಗೆ ಕಾನೂನು ಇತ್ಯಾದಿ ಇಲ್ಲದೆ ಇರಬಹುದು. ಈ ಹೊತ್ತು ವಿರೇಂದ್ರ ಪಾಟೀಲರ ಸರ್ಕಾರದ ಆಡಳಿತ, ಅದಕ್ಕೆ ವಿರೋಧವಾಗಿ ಕುಳಿತುಕೊಂಡಿರುವವರು ವಿರೋಧ ಪಕ್ಷದವರು. ಅದರಲ್ಲಿಯೂ ಈ ಹೊತ್ತಿನ ಪ್ರಚಲಿತ ರಾಜಕೀಯ ಪರಿಸ್ಥಿತಿಯಲ್ಲಿ 'ಮೇನ್ ಪಾರ್ಲಮೆಂಟರಿ ಪ್ರಾಕ್ಟೀಸ್' ಪುಸ್ತಕ ಬರೆದ ಕಾಲದ ನಂತರ ರಾಜಕೀಯ ಪರಿಸ್ಥಿತಿ ಶ್ರೀ ಮಾವಲಂಕರ್ ಅವರು ಅಧ್ಯಕ್ಷರಾಗಿದ್ದುಕೊಂಡು ಕೊಟ್ಟ ತೀರ್ಪಿನ ನಂತರ ರಾಜಕೀಯ ಬೆಳವಣಿಗೆಗಳು, ಎಲ್ಲ ಏನಾಗಿವೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡು ನೋಡಿದರೆ ಅನೇಕ ಬದ ರಾವಣೆಗಳಾಗಿವೆ. ಪಾರ್ಲಮೆಂಟಿನಲ್ಲಿ ಇತ್ತೀಚೆಗೆ ಆಳುವ ಪಕ್ಷವಾಗಿದ್ದ ಕಾಂಗ್ರೆಸ್ ಕಾರಣಾಂತರದಿಂದ, ಒಂದು ಕಡೆ ಪ್ರಧಾನಿ ಇನ್ನೊಂದು ಕಡೆ ಸಂಸ್ಥೆಯ ಅಧ್ಯಕ್ಷರು, ಎರಡು ಪಕ್ಷಗಳಾಗಿ ಒಡೆದು ಹೋಗಿ ನೂಗ ಹೇರಿದ ಜೋಡೆತ್ತು ಗುರ್ತಿನ ಮೇಲೆ ಆರಿಸಿಬಂದಂಥ ಲೋಕಸಭಾ ಸದಸ್ಯರಿಗೆ ಯಾವ ರೀತಿಯಲ್ಲಿ ಕಾಂಗ್ರೆಸ್ಸಿನಚಿಹ್ನೆಯನ್ನು ಹಂಚಬೇಕು ಎನ್ನುವ ಪ್ರಶ್ನೆ ಇತ್ಯರ್ಥವಾಗದೆ ಇರುವ ಸಂದರ್ಭದಲ್ಲಿ, ಪ್ರತಿ ಘಳಿಗೆಯಲ್ಲಿಯೂ ಬದಲಾವಣೆಗಳಾಗುತ್ತಿರುವ ಕಾಲದಲ್ಲಿ ಯಾವುದಕ್ಕೂ ರೂಲ್ಸ್ ಪ್ರಕಾರವೇ ಹೋಗುವುದಕ್ಕೆ ಈ ಹೊತ್ತು ಆಗುತ್ತಿಲ್ಲ. ಒಂದು ಸಲ ತಾವೂ ಹೇಳಿದ್ದೀರಿ. ಅದನ್ನು ಗಮನಿಸಿರಬಹುದು. ಉಪಂಗತ ಬಾಳಿಗಾ ಅವರು ಅಧ್ಯಕ್ಷರಾಗಿದ್ದಾಗ ಒಂದು ಮಾತು ಹೇಳಿದರು. ಒಮ್ಮೆ ಇಂಗ್ಲೆಂಡಿನಲ್ಲಿ ವಿರೋಧಿ ಪಕ್ಷ ಮತ್ತು ಆಳುವ ಪಕ್ಷ ಸೇರಿ ಸಂಯುಕ್ತ ಪಕ್ಷ ಮಾಡಿದಾಗ್ಗೆ ಸಭೆಯ ನಡವಳಿಕೆಯ ಹಿತ ದೃಷ್ಟಿಯಿಂದ ಆಳುವ ಪಕ್ಷದವರು ಅಲ್ಲಿ ಬಂದು ಕುಳಿತು ಕೊಂಡು ವಿರೋಧ ಪಕ್ಷದ ಪಾತ್ರ ವಹಿಸಿದ ಒಂದು ಉದಾಹರಣೆ ಹೇಳಿದ್ದಾರೆ. ಇವತ್ತು ಪಾರ್ಲಮೆಂಟಿನಲ್ಲಿ ಏಕಾಏಕೀ ಕಾಂಗ್ರೆಸ್ ಪಕ್ಷ ಒಡೆದು ಇಬ್ಭಾಗವಾಗಿ ಪಾರ್ಲಮೆಂಟಿನಲ್ಲಿ ರಾಮ ಸುಭಾಗಸಿಂಗರನ್ನು ನಾಯಕರನ್ನಾಗಿ ಕೂಡಿಸಿದೆ. ಶ್ರೀ ರಂಗಾ ಅವರು ಸ್ವತಂತ್ರ ಪಾರ್ಟಿಯವರು ಮೊದಲನೇ ಸ್ಥಾನದಲ್ಲಿ ಕೂತಿದ್ದವರು ರಾಮಸುಭಾಗಸಿಂಗರಪರಿಗೆ ಜಾಗ ಬಿಟ್ಟುಕೊಟ್ಟರು.

ಶ್ರೀ ಎಂ. ಎನ್. ರಾಮಣ್ಣ.—ಸ್ಪಾಮಿ, ಸ್ಪೀಕರ್ ಅವರು ದಿಸಿಸ್ಟ್ ಕೊಟ್ಟರು, ಅದರ ಮೇಲೆ ಸಭೆಯ ಸಂಪ್ರದಾಯದ ಪ್ರಕಾರ ಸಭಾ ನಾಯಕರು, ವಿರೋಧ ಪಕ್ಷದ ನಾಯಕರು ಮಾತ ನಾಡಿದ್ದಾರೆ. ಈಗ ಗೋಪಾಲಗೌಡರು ಮಾತನಾಡುತ್ತಿದ್ದಾರೆ. ನನಗೆ ಅರ್ಥವಾಗಲಿಲ್ಲ ಈ ಸಭೆಯೊಳಗೆ ನಡೆಯಬೇಕಾದ್ದು ಏನು ? ಅವರು ಹೇಳುವುದು ಯಾತರ ಮೇಲೆ ಪರಿಣಾಮವಾಗುತ್ತದೆ ? ಅದು ಕ್ರಮ ಬದ್ಧವಾಗಿದೆಯೇ ? ದಯವಿಟ್ಟು ಹೇಳಬೇಕು.

ಉಪಾಧ್ಯಕ್ಷರು.—ಗೋಪಾಲಗೌಡರು ಮಾತನಾಡಿ ತಮ್ಮ ಸೆಂಟಿಮೆಂಟ್ ಎಕ್ಸಪ್ರೆಸ್ ಮಾಡುತ್ತಾರೋ ಏನೋ ಎಂದು ಆಲೋಚನೆ ಮಾಡಿದೆ. ದಯವಿಟ್ಟು ಮಾನ್ಯ ಸದಸ್ಯರು ಜಾಗ್ರತೆ ಮುಂಗಿನಬೇಕು.

ಶ್ರೀ ಎಸ್. ಗೋಪಾಲಗೌಡ.—ಹೆಚ್ಚು ಕಡಿಮೆಯಾದ ವಿಷಯ ಪ್ರಸ್ತಾಪ ಮಾಡುವುದಕ್ಕೆ ಯೋಗ್ಯವಿದ್ದಿಲ್ಲ. ಅದು ಪಾರ್ಲಿಮೆಂಟಿನಲ್ಲಿ ನಡೆದ ಘಟನೆ. ಇಂದು ವಿಶೇಷ ಪರಿಸ್ಥಿತಿ ಉಂಟಾಗಿದೆ. ಯಾರು ವಿರೋಧ ಪಕ್ಷದಲ್ಲಿದ್ದರು ಅವರು ಆಳುವ ಪಕ್ಷಕ್ಕೆ ಬೆಂಬಲ ಕೊಟ್ಟದ್ದು ಉಂಟು. ವಿರೋಧ ಪಕ್ಷದ ಬೆಂಚುಗಳಲ್ಲಿ ಕೂತುಕೊಂಡು ಪ್ರಧಾನಿ ಕಾಂಗ್ರೆಸ್ಸಿಗೆ ಬೆಂಬಲ ಕೊಟ್ಟ ಘಟನೆ 17ನೇ ತಾರೀಖು ನಡೆದಿದೆ. ಈ ಎಲ್ಲ ಘಟನೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಂದು ಪರಿಸ್ಥಿತಿ ಬದಲಾವಣೆಯಾಗಿದೆ. ಹಳೇ ಪುಸ್ತಕದಲ್ಲಿ ಇರುವ ನಡವಳಿಕೆಯಿಂತೆ ನಡೆಸಲು ಆಗುವುದಿಲ್ಲ. ಇದನ್ನು ಸ್ವಲ್ಪ ವಿಚಾರ ಮಾಡಬೇಕು. ಅಧ್ಯಕ್ಷರಮೇರೆ ನನ್ನ ಆರೋಪ ಏನೂ ಇಲ್ಲ. ಅಥವಾ ಅವರ ಪ್ರಕಟನೆಯ ಹಿಂದೆ ಒಂದು ಪಿತೂರಿ ಇದೆ ಎಂದು ಹೇಳಲು ಇಷ್ಟಪಡುವುದಿಲ್ಲ. ಅವರು ಜೇನುಗೂಡಿಗೆ ಕೈ ಹಾಕಿ ಈಗ ವಿಶ್ರಾಂತಿ ಪಡೆಯಲು ತಮ್ಮ ಚೇಂಬರಿಗೆ ಹೋಗಿರುವುದನ್ನು ವಿಷಾದಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಶ್ರೀಮಾನ್ ಶಿವಪ್ಪನವರ ಬಗ್ಗೆ ಒಳ್ಳೇ ಮಾತುಗಳನ್ನು ಆಡಿದ್ದಾರೆ. ನನಗೆ ಅದನ್ನು ಪೂರ್ತಿ ಕೇಳುವುದಕ್ಕೆ ಆಗಲಿಲ್ಲ ಯಾಕೆಂದರೆ ಆಗ್ಗೆ ನಾನು ಹೊರಗಡೆ ಹೋಗಿದ್ದೆ. ಶ್ರೀ ಶಿವಪ್ಪನವರ ಬಗ್ಗೆ ಒಳ್ಳೇ ಮಾತುಗಳನ್ನು ಆಡಿದ್ದಾರೆ, ಆ ಬಗ್ಗೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಮೊದಲೇ ವಿನಂತಿ ಮಾಡಿಕೊಂಡೆ ಶ್ರೀಮಾನ್ ಶಿವಪ್ಪನವರಿಗೆ ಇದು ಡೀ ಫ್ಯಾಕ್ಟೋ ಅಥವಾ ಡೀ ಜ್ಯುರೋ ಅದು ಕಾನೂನು ಪ್ರಕಾರ ಯಾವುದು ಎನ್ನುವುದು ನನಗೆ ಗೊತ್ತಿಲ್ಲ ಕಾನೂನಿನಲ್ಲಿ ಎನೇನೋ ಬರೆದಿದ್ದಾರೆ—ಈ ಗಳಿಗೆಯವರೆಗೆ ಅವರು ನಾಯಕರಾಗಿದ್ದರು. ಇವತ್ತು ಅವರು ಈಗ ಸಭೆಯಲ್ಲಿ ಇಲ್ಲ ಕೆಲಸದಮೇಲೆ ಬೇರೆ ಕಡೆ ಹೋಗಿದ್ದಾರೆ—ಅವರು ನಿವೃತ್ತಿಯಾಗಿದ್ದಾರೆ. ಅವರನ್ನು ಯಾರು ನಿವೃತ್ತಿ ಮಾಡಬೇಕು, ಅವರನ್ನು ಯಾರು ಆರಿಸಬೇಕು ಅದು ಬೇರೆಯವರಿಗೆ ಸಂಬಂಧಪಟ್ಟದ್ದು. ಅವರ ನಾಯಕತ್ವತಾನೆ ವಿಸರ್ಜನೆಯಾಗುವುದಿಲ್ಲ, ಈ ಪ್ರಶ್ನೆ ಇದೆ. ಮಾನ್ಯ ಸಿದ್ದವೀರಪ್ಪನವರ ಬಗ್ಗೆ ನನಗೆ ಮಾತ್ರವಲ್ಲ ವಿರೋಧಪಕ್ಷದಲ್ಲಿ ಈ ಕಡೆ ಕೂತಿರತಕ್ಕಂಥವರೆಲ್ಲರಿಗೂ ವಿಶ್ವಾಸ ಇದೆ. ಗೌರವ ಇದೆ. ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಇದರಲ್ಲಿ ನನಗೆ ಸಂದೇಹವಿಲ್ಲ. ಅವರೂ ಸಹ ಇದನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ಪಕ್ಷದ ಪರವಾಗಿ ನಾಯಕರಾಗಿ ಕೆಲಸ ಮಾಡುತ್ತಾರೆ. ಅದು ಅವರ ದೊಡ್ಡ ಗುಣ ತೋರಿಸುತ್ತದೆ. ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆ ಮಾಡುವುದಕ್ಕೆ ಹೊಗಳುವುದಕ್ಕೆ ನಾನು ಹೋಗುವುದಿಲ್ಲ. ಈ ಸಭೆಯಲ್ಲಿ ಎಲ್ಲರೂ ಒಂದು ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಯೋಕ ಸಭೆಯಲ್ಲಿ ಏನೇನೋ ಪಕ್ಷಗಳಿವೆ ಯಾವ ಯಾವ ಪಾತ್ರ ವಹಿಸುತ್ತಾರೆ ಎನು ವ ವಿಚಾರ ನಾನು ಮಾಡುವುದಿಲ್ಲ. ಇಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರ ಸರಕಾರ ಈ ಕಾಂಗ್ರೆಸ್ 'ಒ'ಗೆ ಸಂಬಂಧಪಟ್ಟ ಸರಕಾರ ಕೂತರೂ ಕೂಡ, ಅವರಿಂದ ಒಂದು ಹೆಚ್ಚು ಸಂಖ್ಯೆ ವಿರೋಧ ಪಕ್ಷಕ್ಕೆ ಬಂದ ದಿವಸವೇ ಅವರ ಸರಕಾರವನ್ನು ವಿರೋಧ ಪಕ್ಷ ಉರುಳಿಸುತ್ತದೆ. ಮಂತ್ರಿ ಮಂಡಳ ಹೇಗೆ ರಚಿಸುತ್ತೇವೆ. ಯಾರು ಮುಖ್ಯ ಮಂತ್ರಿಗಳಾಗುತ್ತಾರೆ, ಯಾವ ಯಾವ ಪಕ್ಷ ಒಳಗೆ ಸೇರಿಸುತ್ತೇವೆ ಇದೆಲ್ಲಾ ಆ ಮೇಲಿನ ಮಾತು.

ಇನ್ನು ಎರಡನೆಯದು ಶ್ರೀಮಾನ್ ವೀರೇಂದ್ರ ಪಾಟೀಲರ ಕಾಂಗ್ರೆಸ್ 'ಒ' ಸರಕಾರಕ್ಕೆ ವಿರೋಧವಾಗಿ, ಇಲ್ಲಿ ಇರತಕ್ಕಂಥಾ ಎಲ್ಲಾ ವಿರೋಧ ಪಕ್ಷದ ಸದಸ್ಯರು ಯಾವುದೇ ನ್ಯಾಯವಾದ ವಿಷಯದಲ್ಲಿ ಜನತೆಯ ಹಿತ ದೃಷ್ಟಿಯಿಂದ, ರಾಷ್ಟ್ರದಹಿತ ದೃಷ್ಟಿಯಿಂದ ಸರಕಾರದ ತಪ್ಪುಗಳನ್ನು ಅಧಿಕಾರ ದುರುಪಯೋಗವನ್ನು ಲಂಚ ರುಷುವತ್ತು, ಸ್ವಜನ ಪಕ್ಷಪಾತ ಇಂಥಾದ್ದು ಏನೇನು ಬಯಲಿಗೆ ಎಳೆಯಬಹುದೋ ಅದನ್ನು ಯಾವ ದಾಕ್ಷಿಣ್ಯವಿಲ್ಲದೆ ಬಯಲಿಗೆ ಎಳೆಯುವುದಕ್ಕೆ ಸಮಯ ಬಂದರೆ ಸಿದ್ದವೀರಪ್ಪನವರ ನಾಯಕತ್ವದಲ್ಲಿ ಇರತಕ್ಕಂಥ ಪಾರ್ಟಿ ಈ ಗಳಿಗೆಯಲ್ಲಿ ಇಲ್ಲಿ ಇಂದು ಶಿವಪ್ಪನವರು ಇಲ್ಲ ಎಸ್ ಎ ಡಿ ಜನ ಸರಕಾರ ಉರುಳಿಸಲು ಸಿದ್ಧರಾಗಿದ್ದಾರೆ.

ಅದು ಏನೇ ಇರಲಿ ಶ್ರೀಮಾನ್ ಸಿದ್ಧವೀರಪ್ಪನವರ ಪಕ್ಷದವರು, ಎಸ್. ಎ. ಡಿ. ಅವರು ಪಿ.ಎಸ್.ಪಿ., ಎಸ್.ಎಸ್.ಪಿ. ಪಾರ್ಟಿಗಳಿವೆ. ಮತ್ತು ರಿಪಬ್ಲಿಕನ್ ಪಾರ್ಟಿಗೆ ನೀವು ರೆಕಗ್ನೈಸ್ ಮಾಡಲು ಮಾಡದೇ ಇರಲಿ ದೇಶ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಎಂದು ರೆಕಗನೈಸ್ ಮಾಡಿದೆ. ಆ ಪಕ್ಷದ ಪರವಾಗಿ ಶ್ರೀಮಾನ್ ಅರಕೇರಿಯವರು ಆರಿಸಿ ಬಂದಿದ್ದಾರೆ. ನಾಳೆ ಅವರನ್ನು ಎಸ್.ಎ.ಡಿ. ನಾಯಕರನ್ನಾಗಿ ಆರಿಸಿದರೆ ಆಗ ನೀವು ಏನು ಮಾಡುತ್ತೀರಿ ?

ಎರಡನೆದಾಗಿ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರ ಸರ್ಕಾರಕ್ಕೆ ವಿರೋಧವಾಗಿರತಕ್ಕಂಥ ಎಲ್ಲರೂ ಸಂದರ್ಭ ಬಂದಾಗ ಒಟ್ಟಿಗೆ ಸಭಾತ್ಯಾಗ ಮಾಡುತ್ತಾರೆ, ಒಟ್ಟಿಗೆ ನಿಲುವಳಿ ಸೂಚನೆ ಮಂಡಿಸುತ್ತಾರೆ. ಒಟ್ಟಿಗೆ ಅಧ್ಯಕ್ಷರನ್ನು ತೆಗೆಯಬೇಕು ಎಂದು ಸೂಚನೆ ತರುತ್ತಾರೆ. ಆಗ ಎಲ್ಲರೂ ಎದ್ದು ನಿಲುತ್ತಾರೆ. ಅಧ್ಯಕ್ಷರನ್ನು ತೆಗೆದು ಹಾಕಬೇಕು ಎಂದು ಅಪೇಕ್ಷೆ ಹುಟ್ಟಿರೆ 40 ಜನ ಆಲ್ಲ, 80 ಜನ ಎದ್ದು ನಿಲ್ಲುತ್ತಾರೆ ಮತ್ತು ಸಾಧ್ಯವಾದಮಟ್ಟಿಗೂ ಎಲ್ಲರೂ ಆಳುವ ಪಕ್ಷವನ್ನು ವಿರೋಧಿಸಕ್ಕಂಥ ಪ್ರಯತ್ನವನ್ನು ಮಾಡುತ್ತಾರೆ.

ಮೂರನೆಯದಾಗಿ ಎಸ್.ಎ.ಡಿ. ಹೇಗಿರಬೇಕು, ಅವೆಲ್ಲಾ ನಮಗೆ ಸಂಬಂಧಪಟ್ಟದ್ದು. ಸಾಭಾಧ್ಯಕ್ಷರು ನಮ್ಮಿಂದ ಏನು ಅಗತ್ಯಕೆಗಳನ್ನು ನಿರೀಕ್ಷಿಸುತ್ತಾರೋ ಅದನ್ನು ಪೂರೈಸುವುದಕ್ಕೆ ಸಾಧ್ಯವಿದ್ದರೆ ನಾವು ಸಂಯುಕ್ತದಳವನ್ನು ಇಟ್ಟುಕೊಳ್ಳುತ್ತೇವೆ. ಸಾಧ್ಯವಿಲ್ಲದಿದ್ದರೆ ಅದನ್ನು ವಿಸರ್ಜನೆ ಮಾಡುತ್ತೇವೆ. ಪ್ರತಿಯೊಬ್ಬ ಸದಸ್ಯನನ್ನೂ ಜನತೆ ಆರಿಸಿ ಕಳುಹಿಸಿದೆ. ರೂಲ್ಸ್ ಪ್ರಕಾರ ಪ್ರತಿಯೊಬ್ಬ ಸದಸ್ಯನಿಗೆ ಏನೇನು ಹಕ್ಕು ಇದೆಯೋ ಅದೆಲ್ಲವನ್ನೂ ಅವನು ಹೊಂದಿರುತ್ತಾನೆ. ಆ ಹಕ್ಕುಗಳನ್ನು ಪುನಃ ಯಾರೂ ಕರುಣಿಸಬೇಕಾಗಿಲ್ಲ. ಆದುದರಿಂದ ಎಸ್.ಎ.ಡಿ. ಸಮರ್ಪಕವಾಗಿ ತನ್ನ ನಿಯಮಾವಳಿಗಳನ್ನು ಉಳಿಸಿಕೊಳ್ಳಲಾರದೇ ಹೋದರೆ ಆಗ ಪ್ರತಿಯೊಂದು ಪಕ್ಷವನ್ನೂ ಅಥವಾ ಗುಂಪಿನ ವ್ಯಕ್ತಿತ್ವವನ್ನು ಅಧಿಕೃತವಾಗಿ ಮಾನ್ಯ ಮಾಡತಕ್ಕಂಥಾದ್ದು. ಇಂತಹ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಕೊನೆಯದಾಗಿ ಮತ್ತೊಮ್ಮೆ ನಾನು ಎಲ್ಲ ವಿರೋಧ ಪಕ್ಷದವರ ಪರವಾಗಿ ಹೇಳಬೇಕಾದರೆ ಒಂದು ವಿಷಾದಪೂರ್ಣ ಘಟನೆ ಏನೆಂದರೆ ಶ್ರೀಮಾನ್ ಶಿವಪ್ಪನವರು ಹಾಜರು ಇಲ್ಲದೇ ಇದ್ದಾಗ ಅಧ್ಯಕ್ಷರೊಂದಿಗೆ ಸಂಯುಕ್ತದಳದ ವಕ್ತಾರರು ಮಾತನಾಡಿ ಬಂದಿದ್ದರೂ ಕೂಡ ಈ ಒಂದು ಪ್ರಕಟಣೆಯನ್ನು ಪ್ರಕಟಿಸಿ ಇಡೀ ಮನೆಯನ್ನು ಅದರಲ್ಲೂ ವಿರೋಧ ಪಕ್ಷದ ಎಲ್ಲರನ್ನೂ ಗೊಂದಲಕ್ಕೆ ಈಡು ಮಾಡಿ, ಏನೋ ವಿರೋಧ ಪಕ್ಷವಿರೋಧಾಭಾಸದ ಕೆಲವು ಗುಂಪುಗಳಂದ ಕೂಡಿದೆ, ಅವರಲ್ಲಿ ಏನೂ ಧ್ಯೇಯೋ ಧೋರಣೆಗಳು ಇಲ್ಲ ಎನ್ನುವ ಅಭಿಪ್ರಾಯ ಬರುವಂತೆ ಮಾಡಿದ್ದೀರಿ. ಇದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಶ್ರೀಮಾನ್ ವೀರೇಂದ್ರಪಾಟೀಲರು ಡೆಲ್ಲಿಗೆ ಹೋಗಿದ್ದಾರೆ ಎಂದು ಅವರ ಪೈಕಿ ಯಾರಾದರೂ ಒಬ್ಬರು ನನಗೆ ಜಾಸ್ತಿ ಬೆಂಬಲ ಇದೆ ಎಂದು ಗವರ್ನರ್‌ರವರಿಗೆ ಚಾಡಿ ಹೇಳಿದ್ದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ? ಜನರ ಜಾಸ್ತಿ ಬೆಂಬಲ ಯಾರಿಗೆ ಇದೆಯೆಂದು ನೋಡಬೇಕು. ಇಂತಹ ಅಚಾತುರ್ಯ ನಡೆಯಲು ಅವಕಾಶ ಕೊಡದೇ ಹೋದಾಗ ಮಾತ್ರ ಈ ಪ್ರಜಾಪ್ರಭುತ್ವ ಅನ್ನುವುದಕ್ಕೆ ಏನಾದರೂ ಸ್ವಲ್ಪ ಗೌರವ ಸಿಕ್ಕುತ್ತದೆ. ಆದುದರಿಂದ ಈ ಮನೆಯ ಉಪಾಧ್ಯಕ್ಷರ ಮೂಲಕ ವಿನಂತಿ ಮಾಡುತ್ತೇನೆ. ಇಂತಹ ಸಂದರ್ಭದಲ್ಲಿ ಕಾನೂನನ್ನು ಮಾತ್ರ ಹಿಡಿದುಕೊಂಡು ಅದರಂತೆ ನಾನು ವರ್ತಿಸುತ್ತೇನೆ ಎನ್ನುವುದು ಸರಿಯಲ್ಲ. ವಾಸ್ತವಿಕತೆಗೆ ದೂರವಾದ ಘಟನೆಗಳು ಸಂಭವಿಸಿದಾಗ, ವಿವೇಚನೆಯಿಂದ ಮುಂದುವರಿಯಬೇಕು. ವಾಸ್ತವಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಿವೇಚನೆಯಿಂದ ಮುಂದುವರಿಯುವುದು ಒಳ್ಳೆಯದೆಂದು ನಾನು ತಿಳಿಯುತ್ತೇನೆ. ವಿಶೇಷ ರೀತಿಯಿಂದ ಈ ಸಭೆಯ ನಡವಳಿಕೆಗಳನ್ನು ನಡೆಸುವುದರಲ್ಲಿ ತಮಗೆ ಎಲ್ಲರ ಸಹಕಾರ ಅಗತ್ಯ. ಒಳ್ಳೆಯ ವಿಚಕ್ಷಣೆಯಿಂದ ಸರ್ಕಾರ ನಡೆಸಿದರೆ, ಒಳ್ಳೆಯ ಕೆಲಸ ಮಾಡಿದರೆ, ಒಳ್ಳೆಯ ಕೆಲಸ ಮಾಡುತ್ತಾರೆ ಎಂದು ಬೆಂಬಲ ಕೊಡುತ್ತೇವೆ. ಆದರೆ ತಪ್ಪು ಮಾಡಿದಾಗ ಸರ್ಕಾರವನ್ನು ವಿರೋಧಿಸುತ್ತೇವೆ. ಆದುದರಿಂದ ಈ ಸಭೆಯಲ್ಲಿ ಎಲ್ಲರ ಸಹಕಾರ ದೊರೆಯಬೇಕಾದರೆ ಅಧ್ಯಕ್ಷರ ಈ ನಡವಳಿಕೆಗಳಿಂದ ನಾನು ನೊಂದ ಮನಸ್ಸಿನಿಂದ ಒಂದು ಮಾತನ್ನು ಹೇಳುತ್ತೇನೆ. ತಮ್ಮಲ್ಲಿ ಒಂದು ಮಾತನ್ನು ವಿನಂತಿಸಿಕೊಳ್ಳುತ್ತೇನೆ. ಅಧ್ಯಕ್ಷರು ಈ ರೀತಿ ಗೊಂದಲ ಎಬ್ಬಿಸಿ ತಮ್ಮನ್ನು ಪೀಠದಲ್ಲಿ ಕೂಡಿಸಿ ತಮ್ಮ ಆರಾಮ ಕಛೇರಿಗೆ ಹೋದುದು ಸರಿಯಾದ ರೀತಿಯಲ್ಲ. ಶ್ರೀಮಾನ್ ಕೊಠಾವಳೆಯವರ ವಿಚಾರ ನನಗೂ ಗೊತ್ತು. ಅವರು ತಾವು ಯಾರ ಮೇಲೂ ಬಲಪ್ರಯೋಗ ಮಾಡುವುದಿಲ್ಲ, ಅಹಿಂಸಾತ್ಮಕವಾಗಿ ಮನನೋಯಿಸದಂತೆ ಹೋಗಬೇಕು. ನಾವು ಹೆಚ್ಚು ಕಟುವಾಗಿ ಮಾತನಾಡಿದರೆ ತಮಗೆ ಕೂತುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ ನಾನು ವಿರಮಿಸುತ್ತೇನೆ ಇತ್ಯಾದಿ ಇತ್ಯಾದಿಯಾಗಿ ಕೆಲವರು ಮಾತನಾಡುತ್ತಾರೆ. ನನಗೆ ಸಿಟ್ಟು ಬಂದಾಗ ನಾನು ಏನು ಮಾಡುತ್ತೇನೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅದರಂತೆ ಅಧ್ಯಕ್ಷರು ಕೂಡ ಆ ರೀತಿ ಮಾಡಿದರು ಎಂದು ತಿಳಿದುಕೊಳ್ಳುತ್ತೇನೆ. ನಾನು ಮತ್ತೊಮ್ಮೆ ಹೇಳುತ್ತೇನೆ, ಏನೆಂದರೆ ವಿರೋಧಪಕ್ಷದಲ್ಲಿರತಕ್ಕಂಥ ಎರಡಾ ಪಾರ್ಟಿಯವರು ಮತ್ತು ಪಕ್ಷೇತರರು ಒಂದಾಗಿ ಕೂಡಿಕೊಂಡು ವಿರೋಧಪಕ್ಷದ ಕೆಲಸಕಾರ್ಯಗಳನ್ನು ನಿರ್ವಹಿಸುತ್ತೇವೆ ಎನ್ನುವ ಅಶ್ವಾಸನೆಯನ್ನು ಕೊಟ್ಟು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

†ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಮಾನ್ಯ ಅಧ್ಯಕ್ಷರು ಘೋಷಿಸಿರುವ ರೀತ್ಯ ಶ್ರೀಮಾನ್ ಸಿದ್ಧವೀರಪ್ಪನವರು ಅಧಿಕೃತ ವಿರೋಧಿ ಪಕ್ಷದ ನಾಯಕರು ಎಂದು ಪರಿಗಣಿಸಿದ್ದಾರೆ ಮತ್ತು ಕಾಂಗ್ರೆಸ್ (ಆರ್) ಪಾರ್ಟಿಯು ಅಧಿಕೃತ ವಿರೋಧಪಕ್ಷವಾಗಿ ಇರತಕ್ಕಂಥದ್ದು ಎಂಬುದಾಗಿ ಏನು ಅಧ್ಯಕ್ಷರು ಪ್ರಕಟಿಸಿದ್ದಾರೆ ಅದನ್ನು ನಾನು ಸಂತೋಷದಿಂದ

(ಶ್ರೀ ಡಿ. ದೇವರಾಜ ಅರಸ್)

ಸ್ವಾಗತಿಸುತ್ತೇನೆ. ಹಾಗೆ ಶ್ರೀಮಾನ್ ಗೋಪಾಲಗೌಡರು ಈಗತಾನೆ ಕೆಲವು ವಿಷಯಗಳನ್ನು ವಿರೋಧಪಕ್ಷದ ಪರವಾಗಿ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಎರಡು ವಿಷಯಗಳನ್ನು ಹೇಳುವುದಕ್ಕೆ ಮುಂಚೆ ಈ ಸಭೆಯ ವಿರೋಧಪಕ್ಷದ ಅಧಿಕೃತ ನಾಯಕರು ಎಂದು ಈಗತಾನೆ ಶ್ರೀಮಾನ್ ಸಿದ್ದವೀರಪ್ಪನವರ ಹೆಸರನ್ನು ಅಧ್ಯಕ್ಷರು ಹೇಳಿರುವುದಕ್ಕಾಗಿ ಸಂತೋಷಪಡುತ್ತೇನೆ. ಮತ್ತು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡುವುದಕ್ಕೆ ಎಲ್ಲಾ ವಿಧವಾದ ಅರ್ಹತೆ ಪಡೆದಿದ್ದಾರೆ. ದಕ್ಷರಿದ್ದಾರೆ. ಅಡಳಿತ ವಿಷಯಗಳನ್ನು ಅವರು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ಅವರ ಕಾರ್ಯ ಇಲ್ಲಿ ಯಶಸ್ವಿಯಾಗಿ ನಡೆಯುವುದಕ್ಕೆ ವಿರೋಧಪಕ್ಷದಲ್ಲಿರುವ ಎಲ್ಲಾ ಪಕ್ಷಗಳ ನಾಯಕರೂ ಬೆಂಬಲ ಕೊಡುತ್ತಾರೆಂದು ನಾನು ನಂಬುತ್ತೇನೆ. ವಿರೋಧಪಕ್ಷದಲ್ಲಿರುವ ಎಲ್ಲಾ ಪಾರ್ಟಿಯವರು ಯಾವ ರೀತಿ ಒಗ್ಗಟ್ಟಿನಿಂದ ಕೆಲಸ ಮಾಡುತ್ತಾರೆ ಎಂಬ ಬಗ್ಗೆ ಈಗತಾನೆ ಶ್ರೀಮಾನ್ ಗೋಪಾಲಗೌಡರು ಹೇಳಿದರು. ಆ ಬಗ್ಗೆ ನಾನು ಮತ್ತೂ ದೀರ್ಘವಾಗಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಮಾತನಾಡುವಾಗ ಅವರು ವಿರೋಧಪಕ್ಷದಲ್ಲಿರುವ ಎಲ್ಲಾ ಪಾರ್ಟಿಗಳ ಮತ್ತು ಬಿಡಿ ಸದಸ್ಯರ ಪರವಾಗಿ ಎರಡು ಮೂರು ಆಶ್ವಾಸನೆಗಳನ್ನು ಕೊಟ್ಟರು. ಮೊದಲನೆಯ ಆಶ್ವಾಸನೆ ಎಂದರೆ ಶ್ರೀ ವೀರೇಂದ್ರ ಪಾಟೀಲರ ನೇತೃತ್ವದಲ್ಲಿರುವ ಸರ್ಕಾರದ ವಿರುದ್ಧವಾಗಿ ಅವಿಶ್ವಾಸ ನಿರ್ಣಯ ಬಂದರೆ ನಾವೆಲ್ಲರೂ ಒಟ್ಟಾಗಿ ಸ್ವಾಗತಿಸುತ್ತೇವೆ ಮತ್ತು ಬೆಂಬಲ ಕೊಡುತ್ತೇವೆ ಎಂಬುದು. ಮತ್ತು ಆಳುವ ಪಕ್ಷದಲ್ಲಿರುವ ಸದಸ್ಯರಿಗಿಂತ ವಿರೋಧ ಪಕ್ಷದಲ್ಲಿ ಒಬ್ಬರು ಜಾಸ್ತಿಯಾದರೆ ಅಂದೇ ಈ ಸರ್ಕಾರವನ್ನು ಉರುಳಿಸುವುದಕ್ಕೆ ನಾವೆಲ್ಲಾ ಒಟ್ಟಾಗಿ ಬೆಂಬಲ ಕೊಡುತ್ತೇವೆಂದು ಹೇಳಿದರು. ಈ ಅಭಿಪ್ರಾಯವನ್ನು ಅವರು ಎಲ್ಲರ ಪರವಾಗಿ ಹೇಳಿದ್ದೇನೆಂದು ಅವರೇ ಹೇಳಿರಬೇಕಾದರೆ ಅದು ಉಂಟೋ ಇಲ್ಲವೋ ಎಂಬ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಮಾತು ಉಳಿಯುವ ಹಾಗೆ ಎಲ್ಲ ಸದಸ್ಯರೂ ಕೂಡ ಅದಕ್ಕೆ ಬೆಂಬಲ ಕೊಡುತ್ತಾರೆಂದು ನಾನು ಆಶಿಸುತ್ತೇನೆ. ವಿರೋಧಪಕ್ಷ ಯಾವ ರೀತಿ ಕೆಲಸ ಮಾಡಬೇಕು ಎನ್ನುವ ಬಗ್ಗೆ ಎರಡು ಮಾತುಗಳನ್ನು ಅವರು ಹೇಳಿದರು. ಕಾಂಗ್ರೆಸ್ (ಆರ್) ಎಂಬ ಪಕ್ಷ ಉದ್ಭವವಾಗಿದೆ, ಅದಕ್ಕೆ ಶ್ರೀಮಾನ್ ಸಿದ್ದವೀರಪ್ಪನವರು ನಾಯಕರಾಗಿದ್ದಾರೆ. ಅವರು ಎಲ್ಲಾ ಪಕ್ಷಕ್ಕೂ ನಾಯಕರು ಅಲ್ಲದಿದ್ದರೂ ಕೂಡ, ಅವರು ಮಾತಿಗಿಂತ ಕೆಲಸ ನೋಡಿಕೊಂಡು ಕೆಲವು ವಿಚಾರಗಳಲ್ಲಿ ಬೆಂಬಲ ಕೊಡುತ್ತೇವೆ, ಸರ್ಕಾರದ ತಪ್ಪುಗಳನ್ನು ಎತ್ತಿ ತೋರಿಸುವಾಗ, ಲಂಚಗುಳಿತನಗಳನ್ನು ತಪ್ಪಿಸುವ ಬಗ್ಗೆ ಕಾಂಗ್ರೆಸ್ (ಆರ್) ಪಕ್ಷದವರ ಜೊತೆಗೆ ನಾವುಗಳೂ ಸೇರಿಕೊಂಡು ಕೆಲಸ ಮಾಡುತ್ತೇವೆ ಎನ್ನುವ ಕೆಲವು ನಿದರ್ಶನಗಳನ್ನು ಶ್ರೀಮಾನ್ ಗೋಪಾಲಗೌಡರು ಕೊಟ್ಟು ಮಾತನಾಡಿದ್ದಾರೆ. ಅದು ಸ್ವಾಗತಾರ್ಹವಾದ ವಿಷಯವಾಗಿದೆ. ಕಾಂಗ್ರೆಸ್ (ಆರ್) ಪಕ್ಷ ವಿರೋಧ ಪಕ್ಷವಾಗಿದ್ದರೂ ಕೂಡ ಈ ಪಕ್ಷದ ನಾಯಕರಾದ ಶ್ರೀಮಾನ್ ಸಿದ್ದವೀರಪ್ಪನವರು ಎಲ್ಲಾ ಪಕ್ಷದ ನಾಯಕರಾಗಿ ವರ್ತಿಸುತ್ತೇನೆ ಎಂದು ಏನು ಹೇಳಿದ್ದಾರೆ, ಅದರಂತೆ ಎಲ್ಲಾ ಪಕ್ಷಗಳ ಸದಸ್ಯರು ಮತ್ತು ಇತರೇ ಬಿಡಿ ಸದಸ್ಯರುಗಳು ಸಹ ಅವರಿಗೆ ಬೆಂಬಲ ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಪಾರ್ಲಮೆಂಟ್‌ನಲ್ಲಿ ಕಾಂಗ್ರೆಸ್ (ಐ) ವಿರೋಧಪಕ್ಷವಾಗಿ ಕಾಂಗ್ರೆಸ್ (ಆರ್) ಆಡಳಿತ ಪಕ್ಷವಾಗಿ ಕೆಲಸ ಮಾಡುತ್ತಿದೆ. ಇಲ್ಲಿ ಕಾಂಗ್ರೆಸ್ (ಆರ್) ವಿರೋಧಪಕ್ಷವಾಗಿದೆ. ಈ ಒಂದು ಅವಕಾಶ ಸಿಕ್ಕಿ ಎಲ್ಲವು ದೇಶದ ಹಿತದೃಷ್ಟಿಯಿಂದ ನೂರಕ್ಕೆ ನೂರು ಅನೇಕ ದೃಷ್ಟಿಯಿಂದ ಒಳ್ಳೆಯದೆಂದು ಭಾವಿಸುತ್ತೇನೆ ಇದರಿಂದ ದೇಶಕ್ಕೆ ಒಳ್ಳೆಯದಾಗಲೆಂದು ಈ ಸಂದರ್ಭದಲ್ಲಿ ತಿಳಿಸಿ ಮತ್ತೊಮ್ಮೆ ಶ್ರೀಮಾನ್ ಸಿದ್ದವೀರಪ್ಪನವರನ್ನು ವಿರೋಧಪಕ್ಷದ ನಾಯಕರನ್ನಾಗಿ ಘೋಷಿಸಿರುವುದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ಅಭಿನಂದಿಸುತ್ತೇನೆ.

ಶ್ರೀ ಎಸ್.ಶ್ರೀಕಂಠಯ್ಯ—ಸ್ವಾಮಿ, ವಿರೋಧಪಕ್ಷದ ನಾಯಕರು ಯಾರು ಎಂದು ಮಾನ್ಯ ಅಧ್ಯಕ್ಷರು ಪ್ರಕಟ ಮಾಡಿದಾಗ ಅಸುದ್ದಿಯನ್ನು ಕೇಳಿ ನನಗೆ ಸಂತೋಷವಾಯಿತು ನನಗೆ ಅಧ್ಯಕ್ಷರ ಬಗ್ಗೆ ಬಹಳ ಗೌರವವಿದೆ. ಆದರೆ ಅವರು ಆ ವಿಷಯವನ್ನು ಪ್ರಕಟ ಮಾಡಿದ ರೀತಿಯನ್ನು ನೋಡಿದರೆ ನನಗೆ ತುಂಬಾ ವಿಷಾದವಾಗುತ್ತದೆ. ಈ ವಿಷಯ ಪ್ರಕಟ ಮಾಡುವುದನ್ನು ಸ್ವಲ್ಪ ತಡೆಹಿಡಿಯಬೇಕೆಂದು ನಾವು ಕೇಳಿಕೊಂಡಿದ್ದೆವು. ಅವರೂ ಸಹ ಒಪ್ಪಿದ್ದರ ಬಹಶಃ ಹಾಗೆ ಹುಳಿ ಹಿಂಡಿತನಾಷೆ ನೋಡಬೇಕು ಎನ್ನುವ ರೀತಿಯಿಲ್ಲ ಅವರು ಪ್ರಕಟ ಮಾಡಿದರು. ಶ್ರೀಮಾನ್ ಸಿದ್ದವೀರಪ್ಪನವರು ಈ ವರೆಗೆ ವಿರೋಧಪಕ್ಷದ ನಾಯಕರು ಎಂದು ಪ್ರಕಟ ಮಾಡಿದರೆ ವಿರೋಧ ಪಕ್ಷದವರೇ ಇತ್ತೀಚೆಗೆ ಪಾರ್ಟಿಯವರು "ಡಾನ್‌ವಿತ್..." ಎಂದು ಹೇಳಿ ಹೊರಗೆ ಹೋಗುತ್ತಾರೆ ಎಂಬ ದೃಷ್ಟಿಯನ್ನು ಅವರು ಇಟ್ಟುಕೊಂಡಂತೆ ಕಾಣುತ್ತದೆ. ಈ ಒಂದು ಕಪಟನಾಟಕವನ್ನು ಮಾನ್ಯ

ಅಧ್ಯಕ್ಷರು ಅದ್ದು ನನಗೆ ಬಹಳ ದುಃಖವಾಯಿತು. I want to expose the tactics played by the Syndicate Congress along with the collusion of the Speaker. We in Opposition will never get divided whether Sri Siddaveerappa is the Leader or Sri Sivappa is the leader or Sri Chennabasappa is the leader or Sri Devaraj Urs is the leader. We in Opposition are all one to fight this Government. I charge he Hon. Speaker on this issue.

Mr. DEPUTY SPEAKER.—The Hon. Member should not cast assersions on the Chair. The Hon. Speaker has done it according to rules.

ಶ್ರೀ ಎಲ್. ಶ್ರೀಕಂಠಯ್ಯ.—ನನ್ನ ವಿಷಾದಕರ ಸಂಗತಿ ಎಂದರೆ ಮಾನ್ಯ ಅಧ್ಯಕ್ಷರು ಶ್ರೀಮಾನ್ ಸಿದ್ದವೀರಪ್ಪನವರು ವಿರೋಧಪಕ್ಷದ ನಾಯಕರಾಗಿದ್ದಾರೆ ಎಂದು ಪ್ರಕಟ ಪಡಿಸಿದ್ದು ತಮಾಷೆ ನೋಡುವುದಕ್ಕಾಗಿ ಎಂಬ ಕಾರಣ ಏನು? ಅವರ ಹೆಸರನ್ನು ಪ್ರಕಟ ಮಾಡಿದ್ದಾರೆ ಬೇರೆ ಪಾರ್ಟಿಯವರು ಏನು ಮಾಡುತ್ತಾರೋ ನೋಡೋಣ ಎಂಬ ಕಾರಣ ಅವರಲ್ಲಿ ಇತ್ತು ಎಂದು ಕಾಣುತ್ತದೆ. ಈ ಒಂದು ಕ್ರ ರಾಜಕೀಯ ಬೇಡ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿಯೇ ವಿರೋಧಪಕ್ಷ ರುವ ಎಲ್ಲಾ ಪಕ್ಷದ ಮುಖಂಡರಾಗಿ ನಾನು ಇಲ್ಲಿ ವರ್ತಿಸುತ್ತೇನೆಂದು ಮಾನ್ಯ ಸಿದ್ದವೀರ ಪ್ಪನವರು ಪ್ರಕಟಣೆ ಮಾಡಿದ್ದಾರೆ.

ವಿರೋಧಪಕ್ಷದ ಸದಸ್ಯರು ಎಸ್. ಎ. ಡಿ. ಸಭೆಕೇರಿ, ನಮ್ಮ ನಾಯಕರು ಆಯ್ಕೆ ಆದ ವಿಷಯಕ್ಕೆ, ಈಗ ಅಧ್ಯಕ್ಷರು ಏನೋ ಅಪ್ಪಣೆ ಕೊಡಿಸಿದ್ದಾರೆ. ಅದನ್ನು ಅಂಗೀಕರಿಸಿ, ನಾವು ಪರಸ್ಪರ ಸಹಕಾರ ನೀಡುವುದರ ಯಾವ ದೋಷವೂ ಇಲ್ಲ. ಆದ್ದರಿಂದ ನಮ್ಮ ಪೂರ್ಣ ಸಹಕಾರವನ್ನು ರೂಪಂಗ್ ಕಾಂಗ್ರೆಸ್ಸಿಗೆ ಕೊಡುತ್ತೇವೆ ಎಂದು ನಮ್ಮ ಮಿತ್ರರ ಪರವಾಗಿ ಭರವಸೆ ಕೊಡುತ್ತೇನೆ.

Notices of Adjournment Motion.—

(i) *re*: Eviction of Certain Families in Gangavathi.

ಶ್ರೀ ಎಂ. ನಾಗಪ್ಪ.—ನಾನು ಗಂಗಾವತಿಯ ಬಗ್ಗೆ ಒಂದು ಮುಖ್ಯವಾದ ನಿಲುವಳಿ ಸೂಚನೆ ಕಳುಹಿಸಿದ್ದೇನೆ.

Mr. DEPUTY SPEAKER.—I have not looked into it. It will be taken up tomorrow.

Sri M. NAGAPPA.—It is a very important matter. About 50 families have been evicted.

Mr. DEPUTY SPEAKER.—It will be taken up tomorrow.

(ii) *re*: Intimation of arrest by the Magistrates to the Speaker.

Sri M. NAGAPPA.—What about my privilege motion against the Magistrate? I refer to the Rules of Procedure, rule No. 184 and 185. Rule 184 says:—

> "When a member is arrested on a criminal charge or for a criminal offence or is sentenced to imprisonment by a court or is detained under an executive order, the committing judge, magistrate or executive authority, as the case may be, shall